# ಹಂಪಿ ಟೈಮ್ಸ್

HAMPI TIMES

KANNADA DAILY

ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ

EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 286 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 23.05.2025 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue: 286 • PRGI No:KARKAN/2023/88055 • VIJAYANAGARA • 23.05.2025 • Friday • Page:04 • Rs:2





1,30,000+

Digital E-PAPER READERS

To book Classified Display Ad in HAMPI TIMES

Please call on

9448633038

No.1 HAMPI TIMES LEADING PRINT & DIGITAL District News Paper



ಅರಿದೆಡೆ ಶರಣ

ದಿನಾಂಕ: 26-05-2025

ಸೋಮವಾರ ರಾತ್ರಿ

ಶ್ರೀ ಶನೇಶ್ವರ ದೇವರ ಪುರಾಣ ಪ್ರವಚನ, ಭಜನೆ

## ಶ್ರೀ ಶನೇಶ್ವರಸ್ವಾಮಿ ಜಯಂತಿ

ದಿನಾಂಕ: 27-05-2025 ಮಂಗಳವಾರ ಬೆಳಿಗ್ಗೆ 5-00 ಕ್ಕೆ ಗಂಗಾಪೂಜೆ,

ಬೆಳಿಗ್ಗೆ 6.00 ಗಂಟೆಗೆ ದೇವಸ್ಥಾನದಲ್ಲಿ ರುದ್ರಾಭಿಷೇಕ, ವಿಶೇಷ ಪೂಜೆ, ತೈಲಾಭಿಷೇಕ, ಪುಷ್ಪಲಂಕಾರ

ಮರೆತರೆ ಮಾನವ

7090966698
9448795049
7019370389
9481342032



ಪೂಜಾ ಸೇವಾ ವಿವರ : ನಿರಂತರ ಪೂಜೆ | ನವಗ್ರಹ ಶಾಂತಿ ಪೂಜೆ | ಸರ್ವಸೇವೆ ಪೂಜೆ | ರುದ್ರಾಭಿಷೇಕ | ಎಲೆ ಪೂಜೆ | ತೈಲಾಭಿಷೇಕ | ಪಂಚಾಮೃತಾಭಿಷೇಕ

ಶ್ರೀ ಕ್ಷೇತ್ರ ಶನೇಶ್ವರ ದೇವಸ್ಥಾನ ಸಮಿತಿ (ರಿ) ರಾಷ್ಟ್ರೀಯ ಹೆದ್ದಾರಿ ನಂ.50, 13ನೇ ವಾರ್ಡ್, ಪಂಚಾಚಾರ್ಯ ನಗರ, ಟಿ.ಬಿ.ಡ್ಯಾಂ, ಹೊಸಪೇಟೆ-583225


ಮನಸ್ಸು ಎಲ್ಲದಕ್ಕೂ ಮೂಲ,
ಅದನ್ನು ಸರಿಪಡಿಸಿಕೊಳ್ಳದ ಹೊರತು
ಇನ್ನಾವುದು ಸರಿಯಾಗದು
– ಡಿ.ವಿ.ಜಿ


ಹಂಪಿ ಟೈಮ್ಸ್

SCAN TO WATCH



SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ





For Ads-Call
94486 33038


### ಸಂಸದ ರಾಜಶೇಖರ್ ಹಿಟ್ನಾಳ್ ಹೇಳಿಕೆ | ಆಧುನಿಕ ಜಿ+1 ನಿಲ್ದಾಣವು ಹೆಚ್ಚುವರಿ ಪ್ರಯಾಣಿಕರಿಗೆ ಅನುಕೂಲ

# ಪ್ರಯಾಣಿಕರಿಗೆ ಆಧುನಿಕ ಸಮಗ್ರ ಸೌಲಭ್ಯ ಸಹಿತ ಮುನಿರಾಬಾದ್ ರೈಲು ನಿಲ್ದಾಣ ಲೋಕಾರ್ಪಣೆ

### ಪ್ರಧಾನಿ ನರೇಂದ್ರ ಮೋದಿಜಿ ದೇಶದ 103 ರೈಲು ನಿಲ್ದಾಣಗಳನ್ನು ವಿಸಿ ಮೂಲಕ ಉದ್ಘಾಟನೆ






■ ಹಂಪಿ ಟೈಮ್ಸ್ ಕೊಪ್ಪಳ

ಅಮೃತ ಭಾರತ ನಿಲ್ದಾಣ ಯೋಜನೆಯಡಿಯಲ್ಲಿ ಪುನರಾಭಿವೃದ್ಧಿಗೊಂಡ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ರೈಲು ನಿಲ್ದಾಣ ಸೇರಿ ದೇಶದ 103 ರೈಲು ನಿಲ್ದಾಣಗಳು ಮತ್ತು ಇತರ ಯೋಜನೆಗಳನ್ನು ಪ್ರಧಾನಂತ್ರಿಗಳಾದ ನರೇಂದ್ರ ಮೋದಿಜಿ ಅವರು ಗುರುವಾರ ರಾಜಸ್ಥಾನ ರಾಜ್ಯದ ಬಿಕಾನೆರದಿಂದ ವೀಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟನೆ ಮಾಡಿದರು.

ಮುನಿರಾಬಾದ್ ರೈಲು ನಿಲ್ದಾಣವನ್ನು ಮಹತ್ವಾಕಾಂಕ್ಷೆಯ ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ ರೂ. 18.40 ಕೋಟಿ ವೆಚ್ಚದಲ್ಲಿ ವಿಶ್ವ ದರ್ಜೆಯ ಸೌಲಭ್ಯವನ್ನಾಗಿ ಪುನರಾಭಿವೃದ್ಧಿಪಡಿಸಲಾಗಿದೆ. ಈ ಆಧುನಿಕ ಜಿ+1 ನಿಲ್ದಾಣವು ಈಗ ಹೆಚ್ಚುವರಿ ಪ್ರಯಾಣಿಕರಿಗೆ ಅನುಕೂಲವನ್ನು ನೀಡುತ್ತದೆ. ಇದು ಅತ್ಯಾಧುನಿಕ ಮೂಲಸೌಕರ್ಯ ಮತ್ತು ಸಮಗ್ರ ಸೌಲಭ್ಯಗಳನ್ನು ಒಳಗೊಂಡಿದ್ದು, 'ಹೊಸ ಭಾರತ'ದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಈ ನವೀಕರಣವು ಪ್ರಯಾಣಿಕರಿಗೆ ಉತ್ತಮ ಅನುಭವವನ್ನು ನೀಡುವ ಗುರಿಯನ್ನು ಹೊಂದಿದ್ದು, ಮುನಿರಾಬಾದ್ ರೈಲು ನಿಲ್ದಾಣದಲ್ಲಿ ಉತ್ತಮ ಪಾರ್ಕಿಂಗ್, ನಿರೀಕ್ಷಣಾ ಕೊಠಡಿ, ಜಲ ಸಂರಕ್ಷಣೆ, ಸೌರಶಕ್ತಿ, ಹಸಿರು ಸ್ಥಳಗಳ ಮತ್ತು ಇತರೆ ಮೂಲಭೂತ ಸೌಕರ್ಯಗಳ ವ್ಯವಸ್ಥೆಗಳನ್ನು ಮಾಡಲಾಗಿದೆ.

ಅಮೃತ ಭಾರತ ನಿಲ್ದಾಣ ಯೋಜನೆ ಯಡಿಯಲ್ಲಿ ಪುನರಾಭಿವೃದ್ಧಿಗೊಂಡ ರೈಲು ನಿಲ್ದಾಣಗಳ ಉದ್ಘಾಟನೆ ಅಂಗವಾಗಿ ಮುನಿರಾಬಾದ್ ರೈಲು ನಿಲ್ದಾಣದ ಆವರಣದಲ್ಲಿಯೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಕೊಪ್ಪಳ ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಭಾಗವಹಿಸಿ ಮಾತನಾಡಿ, ಬಡವರಿಗೆ ಕಡಿಮೆ ದರದಲ್ಲಿ ಸಾರಿಗೆ ಸೇವೆ ಒದಗಿಸುವ ವ್ಯವಸ್ಥೆ ರೈಲ್ವೆ ಇಲಾಖೆಯದ್ದಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕಡಿಮೆ ದರದಲ್ಲಿ ದೇಶಾದ್ಯಂತ ಪ್ರಯಾಣ ಮಾಡಲು ರೈಲ್ವೆ ವಲಯ ಒಂದು ಜನಸ್ನೇಹಿಯಾಗಿದೆ. ಇಂತಹ ರೈಲ್ವೆ ಇಲಾಖೆಯಲ್ಲಿ ರೈಲು ನಿಲ್ದಾಣಗಳನ್ನು ಉನ್ನತೀಕರಿಸಿ, ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡುವಂತಹ ಕೆಲಸ ಕೇಂದ್ರ ಸರ್ಕಾರ ಮಾಡುತ್ತಿದೆ. ಇದರ ಭಾಗವಾಗಿ ಮುನಿರಾಬಾದ್ ರೈಲ್ವೆ ನಿಲ್ದಾಣ ಅಮೃತ ಭಾರತ ನಿಲ್ದಾಣ ಯೋಜನೆಯಡಿ ಪುನರಾಭಿವೃದ್ಧಿಪಡಿಸಿ ರೂ. 18.40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿ ಲೋಕಾರ್ಪಣೆ ಮಾಡಲಾಗಿದೆ. ಇದರಿಂದ ಶ್ರೀ ಹುಲಿಗೆಮ್ಮ ದೇವಿ ಸ್ಥಾನದ ದರ್ಶನಕ್ಕಾಗಿ ಬರುವ ಭಕ್ತಾಧಿಗಳಿಗೆ ತುಂಬಾ ಅನುಕೂಲವಾಗಿದೆ ಎಂದರು.

ನಮ್ಮ ಭಾಗದಲ್ಲಿ ಬಹಳಷ್ಟು ರೈಲ್ವೆ ಯೋಜನೆಗಳು ಆಗಬೇಕಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಮುನಿರಾಬಾದ್ ರೈಲು ನಿಲ್ದಾಣಕ್ಕೆ ಶ್ರೀ ಹುಲಿಗೆಮ್ಮ ದೇವಿ ತಾಯಿಯ ಹೆಸರಿಡುವಂತೆ ಹಲವಾರು ಜನರು ಮನವಿ ಮಾಡಿದ್ದು, ಈಗಾಗಲೇ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋದ ತಕ್ಷಣ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಇದರ ಜೊತೆಗೆ ಬಾಣಾಪುರ ರೈಲು ನಿಲ್ದಾಣಕ್ಕೆ ಮಹಾತ್ಮಾ ಗಾಂಧಿಜಿ ಹಾಗೂ ಗಂಗಾವತಿ ರೈಲು ನಿಲ್ದಾಣಕ್ಕೆ ಕಿಷ್ಕಿಂದ ಎಂದು ಮರು ನಾಮಕರಣಕ್ಕೆ ಪ್ರಸ್ತಾವನೆಯನ್ನು ಕೊಡಲಾಗಿದೆ. ಹುಬ್ಬಳ್ಳಿಯಿಂದ ಹೊಸಪೇಟೆಗೆ ಬರುವ ರೈಲ್ವೆ ಮಾರ್ಗದಲ್ಲಿ ಬಹಳಷ್ಟು ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ. ಮುಂಬರುವ ದಿನಗಳಲ್ಲಿ ಇನ್ನೂ ಎರಡು ರೈಲು ಹಳಿಗಳನ್ನು ನಿರ್ಮಾಣ ಮಾಡುವ ಕೆಲಸ ಆಗಬೇಕಿದೆ. ರೈಲ್ವೆ ಮಾರ್ಗದಲ್ಲಿ ಬರುವ ಎಲ್ಲಾ ರೈಲ್ವೆ ಗೇಟ್‌ಗಳಲ್ಲಿ ಮಾನವ ರಹಿತ ಕ್ರಾಸಿಂಗ್ ವ್ಯವಸ್ಥೆ ಆಗಲಿವೆ. ನಿರ್ಮಾಣದಲ್ಲಿರುವ ಹುಲಿಗಿಯ ರೈಲ್ವೆ ಗೇಟ್‌ನ ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಜನರಿಗೆ ಅನುಕೂಲ ಮಾಡಿಕೊಡಲು ಕ್ರಮ ವಹಿಸಲಾಗುವುದು. ನಮ್ಮ ಭಾಗದಲ್ಲಿರುವ ಹನುಮನ ಜನ್ಮಸ್ಥಳವಾದ ಅಂಜಾದ್ರಿಯಿಂದ ಅಯೋಧ್ಯೆಗೆ ವಿಶೇಷ ರೈಲು ಓಡಿಸಬೇಕೆಂಬುದು ಇಲ್ಲಿನ ಬಹುಜನರ ಬೇಡಿಕೆಯಾಗಿದೆ. ಇದಕ್ಕಾಗಿ ರೈಲ್ವೆ ಮಂತ್ರಿಗಳಿಗೆ ಮನವಿ ಮಾಡಲಾಗಿದೆ ಎಂದರು.

>> 2


## ಎಸ್ಸೆಸ್ಸೆಲ್ಸಿ–2 ಪರೀಕ್ಷಾ ಕೇಂದ್ರದ ಸುತ್ತ ನಿಬರ್ಂಧಿತ ಪ್ರದೇಶ ಘೋಷಣೆ

■ ಹಂಪಿ ಟೈಮ್ಸ್ ಹೊಸಪೇಟೆ

2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ–2 ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿಬರ್ಂಧಿತ ಪ್ರದೇಶ ವೆಂದು ಘೋಷಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶಿಸಿದ್ದಾರೆ.



ಜಿಲ್ಲೆಯಾದ್ಯಂತ ಮೇ.26 ರಿಂದ ಜೂ.02 ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ–2 ಪರೀಕ್ಷೆಗಳು ಸುಗಮವಾಗಿ ನಡೆಯುವ ನಿಟ್ಟಿನಲ್ಲಿ 23 ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಬರುವ ಹಿತದೃಷ್ಟಿಯಿಂದ, ನಿಬರ್ಂಧಿತ ಪ್ರದೇಶದ ವ್ಯಾಪ್ತಿಯಲ್ಲಿ ಜೆರಾಕ್ಸ್, ಸೈಬರ್ ಸೆಂಟರ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಯಾವುದೇ ಬಾಹ್ಯ, ಅನ್ಯ ವ್ಯಕ್ತಿಗಳಿಗೆ ಹಾಗೂ ಎಲ್ಲಾ ಮಾಧ್ಯಮದವರಿಗೆ ಪ್ರವೇಶ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು ಅನಿವಾರ್ಯ ಸಂದರ್ಭಗಳಲ್ಲಿ ಸಂವಹನಕ್ಕಾಗಿ ಬೇಸಿಕ್ ಮೊಬೈಲ್ ಫೋನ್ ಬಳಸಲು ಮಾತ್ರ ಅನುಮತಿ ನೀಡಲಾಗಿದ್ದು, ಸದರಿ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿ, ಸಿಬ್ಬಂದಿ ಹಾಗೂ ಪರೀಕ್ಷಾರ್ಥಿಗಳಿಗೆ ಕಡ್ಡಾಯವಾಗಿ ಮೊಬೈಲ್ ಫೋನ್‌ನನ್ನು ನಿಷೇಧಿಸಿದೆ ಎಂದು ಡಿಸಿ ತಿಳಿಸಿದ್ದಾರೆ.



## ದ್ವಿತೀಯ ಪಿಯು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಿ

■ ಹಂಪಿ ಟೈಮ್ಸ್ ರಾಯಚೂರು

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ–3ಕ್ಕೆ ನೋಂದಾಯಿಕೊಂಡು ಪರೀಕ್ಷೆಗೆ ಹಾಜರಾಗಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೊಟ್ಟೂರು ಬಸಪ್ಪ ಹೇಳಿದರು.

ಗುರುವಾರ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. 2025 ದ್ವಿತೀಯ ಪಿಯುಸಿ ಪರೀಕ್ಷಾ–2ಕ್ಕೆ ಅವಕಾಶ ಕಲ್ಪಿಸಿದ್ದರಿಂದ

>>4

## ಮೇ.24 ರಂದು ಹೊಸಪೇಟೆಯ ವಿವಿಧೆಡೆ ವಿದ್ಯುತ್ ವ್ಯತ್ಯಯ

ಹಂಪಿ ಟೈಮ್ಸ್ ಹೊಸಪೇಟೆ

ನಗರದಲ್ಲಿನ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮೇ.24 ರಂದು, ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆವರೆಗೆ ನಿರ್ವಹಣಾ ಕೆಲಸ ಮತ್ತು ಇತರೆ ದುರಸ್ತಿ ಕಾರ್ಯ ಹಮ್ಮಿಕೊಂಡಿರುವುದರಿಂದ ನಗರದಲ್ಲಿ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ನಗರದ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೊಳಪಡುವ ಸುತ್ತ ಮುತ್ತಲಿನ ಪ್ರದೇಶಗಳಾದ ಬಸವೇಶ್ವರ ಬಡವಾಣೆ, ಡಾ.ಬಿ.ಆರ್.ಅಂಬೇಡ್ಕರ್ ಸರ್ಕಲ್, ಡಾ.ಪುನೀತ್ ರಾಜಕುಮಾರ್ ಸರ್ಕಲ್, ರಾಜೀವ ನಗರ. ರೈಲ್ವೆ ಸ್ಟೇಷನ್, ಅಮರಾವತಿ, ಚಿತ್ತವಾಡಗಿ, ಶುಗರ್ ಫ್ಯಾಕ್ಟರಿ, ಹಂಪಿ ರೋಡ್, ಗಣೇಶ ಗುಡಿ, ನೌಕರ ಕಾಲೋನಿ, ಗಾಂಧಿ ಸರ್ಕಲ್, ಬಸ್ ಸ್ಟಾಂಡ್. ಮೇನ್ ಬಜಾರ್, ಕೋರ್ಟ್, ರಾಣಿಪೇಟೆ, ಭಟ್ರಹಳ್ಳಿ, ಬೆನಕಾಪುರ, ಬಸವನದುರ್ಗ, ನಾಗೇನಹಳ್ಳಿ ಹಾಗೂ ನರಸಾಪುರ ಭಾಗದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಜೆಸ್ಕಾಂ ಕಾರ್ಯ ಮತ್ತು ಪಾಲನಾ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಪ್ರತಿಜ್ಞೆ ಸ್ವೀಕಾರ



■ ಹಂಪಿ ಟೈಮ್ಸ್ ಹೊಸಪೇಟೆ

ಕನ್ನಡ ವಿಶ್ವವಿದ್ಯಾಲಯದ ಕ್ರಿಯಾಶಕ್ತಿ ಮುಂಭಾಗದಲ್ಲಿ ಬುಧವಾರ ಕುಲಪತಿ ಡಾ.ಡಿ.ವಿ. ಪರಮಶಿವ ಮೂರ್ತಿ, ಕುಲಸಚಿವರು ಹಾಗೂ ಸಿಬ್ಬಂದಿವರ್ಗ ಸೇರಿ ಭಯೋತ್ಪಾದನಾ ವಿರೋಧಿ ದಿನದ ಅಂಗವಾಗಿ ಪ್ರತಿಜ್ಞಾ ವಚನ ಸ್ವೀಕಾರ ಮಾಡಿದರು.

'ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ರಾಷ್ಟ್ರದ ಭವ್ಯ ಪರಂಪರೆಯಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪ್ರಜೆಗಳಾದ ನಾವು ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಎದುರಿಸುತ್ತೇವೆ ಎಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇವೆ. ನಮ್ಮ ಸಹಬಾಂಧವರಲ್ಲಿ ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವನ್ನು ಸಾಧಿಸಲು ಹಾಗೂ ಉತ್ತೇಜಿಸಲು ಮತ್ತು ಮಾನವ ಜೀವಕ್ಕೆ ಹಾಗೂ ಮೌಲ್ಯಗಳಿಗೆ ಬೆದರಿಕೆ ಒಡ್ಡುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ನಾವು ಪಣ ತೊಡುತ್ತೇವೆ" ಎಂದು ಪ್ರತಿಜ್ಞಾ ವಚನ ಸ್ವೀಕರಿಸಿದರು.

ವಿಶ್ವವಿದ್ಯಾಲಯದ ಪ್ರತಿಯೊಂದು ವಿಭಾಗಗಳಲ್ಲಿ ಪ್ರತಿಜ್ಞಾ ವಚನ ಸ್ವೀಕಾರ ಕಾರ್ಯಕ್ರಮ ನಡೆಯಿತು.


Vinayaka Education society

**Laharry English Medium Higher Primary School**

Harihara Road, Hospet

E-mail: veshpt73@gmail.com

M: 8296339827, 9448765034

Requirement of Teachers and Drivers for the following posts, for the academic 2025-26

| Sl. No | Subject | Qualification | Class | No.of Posts |
|---|---|---|---|---|
| 01 | Science and mathematics | B.Sc., B.Ed | 5th Std | 01 |
| 02 | P.ET | B.P.Ed. C.P.Ed | 1st Std to 4th Std | 01 |
| 03 | School Bus Drivers | Heavy Licence with Badge with 3 years Experience | - | 04 |

Eligible Candidates can apply within 7 days

# ಮುನಿರಾಬಾದ್ ರೈಲು ನಿಲ್ದಾಣ ಲೋಕಾರ್ಪಣೆ

**ಮೊದಲ ಪುಟದಿಂದ**

ಕೊಪ್ಪಳ ಜಿಲ್ಲೆಯ ರೈಲ್ವೆ ಅಭಿವೃದ್ಧಿಯಲ್ಲಿ ಹಿಂದಿನ ಸಂಸದರಾದ ಕರಡಿ ಸಂಗಣ್ಣನವರ ಪರಿಶ್ರಮವೂ ಇದೆ. ಹೊಸ ರೈಲು ಮಾರ್ಗಗಳಾದ ಗಂಗಾವತಿ–ಬಾಗಲಕೋಟೆ ಲೈನ್‌ಗೆ ರೂ. 950 ಕೋಟಿ ಹಾಗೂ ಗಂಗಾವತಿ–ದರೋಜಿ ಲೈನ್‌ಗೆ ರೂ. 402 ಕೋಟಿಗಳ ಅನುದಾನವನ್ನು ನೀಡಲು ರೈಲ್ವೆ ಇಲಾಖೆಯ ರಾಜ್ಯ ಸಚಿವರಾದ ವಿ.ಸೋಮಣ್ಣನವರಿಗೆ ಮನವಿ ಮಾಡಿದ್ದು, ಈ ವರ್ಷ ಒಂದು ಮತ್ತು ಮುಂದಿನ ವರ್ಷ ಮತ್ತೊಂದು ಕಾಮಗಾರಿಗೆ ಅನುಮೋದನೆ ನೀಡುವುದಾಗಿ ಸಚಿವರು ಭರವಸೆಯನ್ನು ನೀಡಿದ್ದಾರೆ. ಕೊಪ್ಪಳ ನಗರದ ಸ್ವಾಮಿವಿವೇಕಾನಂದ ಶಾಲೆಯ ಹತ್ತಿರದ ರೈಲ್ವೆ ಲೈನ್ ಬಳಿಯ ಸೇತುವೆಯ ಕಾಮಗಾರಿ ಯನ್ನು ಪೂರ್ಣಗೊಳಿಸಲಾಗುವುದು. ಹಿಟ್ನಾಳ್ ಕ್ರಾಸ್ ಎಲ್.ಸಿ ಸಂಖ್ಯೆ–17ಕ್ಕೆ ಟೆಂಡರ್ ಆಗಿದ್ದು, ಶೀಘ್ರದಲ್ಲಿಯೇ ಅಡಿಗಲ್ಲು ಹಾಕಲಾಗುವುದು. ಮುನಿರಾಬಾದ್ ರೈಲು ನಿಲ್ದಾಣದಲ್ಲಿ ನಿಲ್ಲದ ಟ್ರೈನ್‌ಗಳ ನಿಲುಗಡೆಗೆ ಸಾರ್ವಜನಿಕರು ಮನವಿ ಮಾಡಿದ್ದು, ಇದಕ್ಕೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಮಾತನಾಡಿ, ಮುನಿರಾಬಾದ ರೈಲ್ವೆ ನಿಲ್ದಾಣವು ನವೀಕರಣಗೊಂಡು ಉದ್ಘಾಟನೆಯಾಗಿರುವುದು ನಮ್ಮ ಭಾಗದ ಜನರಿಗೆ ಇಂದು ಸಂತಸದ ದಿನವಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ರೈಲ್ವೆಯ ಹೊಸ–ಹೊಸ ಮಾರ್ಗಗಳಿಂದಾಗಿ ಜನರಿಗೆ ವಿವಿಧ ಊರುಗಳ ಪ್ರಯಾಣಕ್ಕೆ ಅನುಕೂಲವಾಗುತ್ತಿದೆ. ಮುಂಬರುವ ದಿನಮಾನಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಟ್ರಂಕ್ ರೂಟ್ ವ್ಯವಸ್ಥೆಯಾಗಲಿದೆ. ಮುನಿರಾಬಾದ್ ರೈಲು ನಿಲ್ದಾಣದ ಅಭಿವೃದ್ಧಿಯಿಂದ ಶ್ರೀ ಹುಲಿಗೆಮ್ಮ ದೇವಿಯ ಜಾತ್ರೆಯ ಸಮಯದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬರುವ ಭಕ್ತಾಧಿಕಗಳಿಗೆ ಹಾಗೂ ಇಲ್ಲಿನ ಸುತ್ತು–ಮುತ್ತಲಿನ ಪ್ರವಾಸಿತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೂ ತುಂಬಾ ಅನುಕೂಲವಾಗಲಿದೆ ಎಂದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ, ಮುನಿರಾಬಾದ್ ರೈಲು ನಿಲ್ದಾಣ ಹೆಚ್ಚು ಜನ ದಟ್ಟಣೆ ಇರುವ ನಿಲ್ದಾಣವಾಗಿದೆ. ಹುಲಿಗೆಮ್ಮ ದೇವಿ ದೇವಸ್ಥಾನ ಇರುವುದರಿಂದ ಇಲ್ಲಿಗೆ ಲಕ್ಷಾಂತರ ಭಕ್ತರು ಬರುತ್ತಾರೆ ಹಾಗಾಗಿ ಮುನಿರಾಬಾದ್ ರೈಲು ನಿಲ್ದಾಣಕ್ಕೆ ಹುಲಿಗೆಮ್ಮ ದೇವಿ ರೈಲು ನಿಲ್ದಾಣ ಎಂದು ನಾಮಕರಣ ಮಾಡಬೇಕು. ಅಮೃತ ಭಾರತ ಸ್ಟೇಷನ್ ಅಡಿ ಪುರಾಭಿವೃದ್ಧಿ ಪಡಿಸಲಾದ ಮುನಿರಾಬಾದ್ ರೈಲು ನಿಲ್ದಾಣ ಸೇರಿದಂತೆ ದೇಶದ 103 ರೈಲು ನಿಲ್ದಾಣಗಳನ್ನು ಪ್ರಧಾನ ಮಂತ್ರಿಗಳು ಇಂದು ಉದ್ಘಾಟನೆ ನೆರವೇರಿಸುತ್ತಿರುವುದು ನಮಗೆ ಸಂತಸ ತಂದಿದೆ ಎಂದರು.

ಅಮೃತ ಭಾರತ ಸ್ಟೇಷನ್ ಯೋಜನೆ ಅಡಿಯಲ್ಲಿ ಪುನರಾಭಿವೃದ್ಧಿಗೊಂಡ ರೈಲು ನಿಲ್ದಾಣಗಳು ತುಂಭಾ ಸುಂದರವಾಗಿವೆ ಹಾಗೂ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹಲವಾರು ಸೌಲಭ್ಯಗಳನ್ನು ಒದಗಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಹಲವಾರು ಐತಿಹಾಸಿಕ ಪ್ರವಾಸಿ ಸ್ಥಳಗಳು ಇರುವುದರಿಂದ ಇಲ್ಲಿಗೆ ಬರುವ ಪ್ರವಾಸಿಗರಿಗೂ ರೈಲು ಸಾರಿಗೆಯಿಂದ ತುಂಬಾ ಅನುಕೂಲವಾಗಲಿದೆ ಎಂದು ಹೇಳಿದರು.

**ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ:** ನೈಋತ್ಯ ರೈಲ್ವೆ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಾಗಿದ್ದ ಪ್ರಬಂಧ, ಚರ್ಚಾ ಹಾಗೂ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಹುಲಿಗಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ನಿಲಮ್ಮ ಸಿದ್ದಪ್ಪ ಗುಂಗಾಡಿ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಮಾಜಿ ಶಾಸಕರಾದ ಬಸಬವರಾ ದಢೇಸೂಗೂರು, ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿ ಎಂ.ಹೆಚ್.ಪ್ರಕಾಶರಾವ್, ನೈಋತ್ಯ ರೈಲ್ವೆ ವಲಯ ಹುಬ್ಬಳ್ಳಿಯ ವಿಭಾಗಿಯ ವ್ಯವಸ್ಥಾಪಕ ಡಾ. ಅನೂಪ್ ಅಳ್ವಾ ಸೇರಿದಂತೆ ಇತರೆ ಜನಪ್ರತಿನಿಧಿಗಳು ಮತ್ತು ಮುನಿರಾಬಾದ್ ರೈಲ್ವೆ ನಿಲ್ದಾಣದ ಅಧಿಕಾರಿ, ಸಿಬ್ಬಂದಿ ಹಾಗೂ ಹುಲಿಗಿ ಗ್ರಾಮಸ್ಥರು ಉಪಸ್ಥಿತರಿದ್ದರು.

ನಿಮ್ಮೂರ ಜಾತ್ರಾ ಮಹೋತ್ಸವಕ್ಕೆ ಸ್ವಾಗತ/ ಶುಭಾಶಯ
ಸಾಧಕರಿಗೆ ಅಭಿನಂದನೆ ಕೋರುವ ಬಯಸುವವರು
ಸಂಪರ್ಕಿಸಿ ಮೊ: 9448633038

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕಲಿಕೆ ನ್ಯೂನತೆಗಳು-ಪರಿಹಾರಗಳು

ಧೃತಿಕ್ 9 ವರ್ಷದ, 3ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲಕ. ಅವನಿಗೆ 1 ರಿಂದ 9 ರವರೆಗಿನ ಸಂಖ್ಯೆಗಳನ್ನು, ಥ ಮತ್ತು ಜ ರೀತಿಯ ಅಕ್ಷರಗಳನ್ನು ಸರಿಯಾಗಿ ಗುರುತಿಸಲು, ಬರೆಯಲು ಸಾಧ್ಯವಾಗುತ್ತಿಲ್ಲ. ಸಂಖ್ಯೆ ಮತ್ತು ಅಕ್ಷರಗಳನ್ನು ತಿರುಗು ಮುರುಗಾಗಿ ಬರೆಯುತ್ತಾನೆ. ಅವನ ಬರವಣಿಗೆ ಸಾಕಷ್ಟು ಕಾಗುಣಿತ ದೋಷಗಳನ್ನು ಹೊಂದಿದೆ. ಅಕ್ಷರಗಳನ್ನು ದುಂಡಾಗಿ ಬರೆಯಲು ಆಗುತ್ತಿಲ್ಲ. ಅವನಿಗೆ ಸರಿಯಾಗಿ ಲೇಖನಿ ಹಿಡಿಯಲು ಬರುತ್ತಿಲ್ಲ.




ಕ್ಷಮಾ 6 ನೇ ತರಗತಿಯಲ್ಲಿ ಓದುತ್ತಿರುವ ಬಾಲಕಿ. ಅವಳಿಗೆ ಸರಳ ಪದಗಳನ್ನು ಓದಲು ತುಂಬಾ ಕಷ್ಟವಾಗುತ್ತದೆ. ಉಚ್ಚಾರಣೆ ಸ್ಪಷ್ಟತೆ ಇಲ್ಲಾ. ಸರಳ ವಾಕ್ಯವನ್ನು ಓದಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವಳು ತನ್ನ ಮನಸ್ಸಿನ ಭಾವನೆ, ವಿಚಾರಗಳನ್ನು ಮಾತುಗಳಲ್ಲಿ ಹಾಗೂ ಬರೆಹದಲ್ಲಿ ವ್ಯಕ್ತಪಡಿಸಲು ಕಷ್ಟ ಪಡುತ್ತಾಳೆ.

ಮನೋಜ್ 7 ನೇ ತರಗತಿಯಲ್ಲಿ ಓದುತ್ತಿದ್ದಾನೆ. ಅವನಿಗೆ ಗಣಿತದ ಸರಳ ಸಂಕಲನ, ವ್ಯವಕಲನ, ಗುಣಾಕಾರ, ಭಾಗಕಾರ ಲೆಕ್ಕಗಳನ್ನು ಬಿಡಿಸಲು ಸಾಧ್ಯವಾಗುತ್ತಿಲ್ಲ. ಸಂಖ್ಯೆಗಳನ್ನು ಓದಲು, ಸ್ಥಾನಬೆಲೆ ತಿಳಿಯುವುದು, ಎಣಿಕೆ, ಅಳತೆ ಮಾಡುವುದು, ವಿವಿಧ ಗಣಿತದ ಆಕೃತಿಗಳನ್ನು ಗುರುತಿಸಲು ಅವನಿಗೆ ಕಷ್ಟವಾಗುತ್ತಿದೆ. ಕಲಿತದ್ದು ನೆನಪಿನಲ್ಲಿ ಉಳಿಯುತ್ತಿಲ್ಲ.

ಅಮಿತ್ 4 ನೇ ತರಗತಿ ವಿದ್ಯಾರ್ಥಿ. ಅವನಿಗೆ ಒಂದೆಡೆ ಕೆಲವು ನಿಮಿಷಗಳ ಕಾಲ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ, ಅತೀವ ತಂಟೆ, ಸಹಪಾಠಿಗಳೊಂದಿಗೆ ಜಗಳ ಮಾಡುತ್ತಾನೆ. ಒಂದು ಬಾರಿ ತರಗತಿಯಲ್ಲಿ ಶಿಕ್ಷಕರಿಲ್ಲದಿದ್ದಾಗ ತನ್ನ ಪಕ್ಕದ ಕುಳಿತ ಹುಡುಗನೊಬ್ಬನಿಗೆ ಚೂಪಾದ ಪೆನ್ಸಿಲ್ನಿಂದ ತೊಡೆಗೆ ಚುಚ್ಚಿ ಗಾಯ ಮಾಡಿದ್ದಾನೆ.ಓದಿನಲ್ಲಿ ಅವನಿಗೆ ಏಕಾಗ್ರತೆ ಇಲ್ಲ, ಶಿಕ್ಷಕರು, ಪಾಲಕರು ಅವನ ತಪ್ಪಿಗೆ ದಂಡಿಸಿದಂತೆಲ್ಲ ಅವನ ಕೋಪ, ಹಠ ಹೆಚ್ಚುತ್ತಾ ಹೋಗುತ್ತಿದೆ.ತಪ್ಪುಗಳು ಪುನರಾವರ್ತನೆಯಾಗುತ್ತಿವೆ.

ಈ ಮೇಲಿನ ಪ್ರಕರಣಗಳನ್ನು ಗಮನಿಸಿದಾಗ ಆ ಮಕ್ಕಳು ಕಲಿಕಾ ನ್ಯೂನತೆ ಹಾಗೂ ವರ್ತನಾ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎನ್ನುವುದು ತಿಳಿಯುತ್ತದೆ.

ವಯೋಮಾನಕ್ಕಾನುಗುಣವಾಗಿ ನಿರೀಕ್ಷಿತ ಮಟ್ಟದಲ್ಲಿ ಮಕ್ಕಳಲ್ಲಿ ಕಲಿಕೆ ಆಗದಿದ್ದಾಗ, ವರ್ತನಾತ್ಮಕ ಸಮಸ್ಯೆಗಳು ಕಂಡು ಬಂದಾಗ ಮಕ್ಕಳ ಪಾಲಕರು ಹಾಗೂ ಶಿಕ್ಷಕರು ಚಿಂತಿತರಾಗುತ್ತಾರೆ. ಅವರ ಸಮಸ್ಯೆಯ ಮೂಲ ಅರಿಯಲು ವಿಫಲರಾಗಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಮಕ್ಕಳನ್ನು ದಂಡಿಸುತ್ತಾರೆ. ಕಲಿಕೆಯಲ್ಲಿ ಮಕ್ಕಳು ಹಿಂದುಳಿಯಲು ಹಾಗೂ ಅನೇಕ ರೀತಿಯ ಅವರ ವರ್ತನಾತ್ಮಕ ಸಮಸ್ಯೆಗಳಿಗೆ ಕಲಿಕಾ ನ್ಯೂನತೆಗಳು ಕಾರಣವಾಗುತ್ತವೆ.ಹಾಗಾದರೆ ಆ ಕಲಿಕಾ ನ್ಯೂನತೆಗಳಾವುವು ಎನ್ನುವುದರ ಬಗ್ಗೆ ನಾವು ತಿಳಿದುಕೊಳ್ಳೋಣ.

ಕಲಿಕಾ ನ್ಯೂನತೆಗಳಲ್ಲಿ ಪ್ರಮುಖವಾಗಿ ಡಿಸ್ಲೆಕ್ಸಿಯ, ಡಿಸ್ಗ್ರಾಫಿಯ, ಡಿಸ್ಕ್ಯಾಲುಕ್ಲಿಯ ಹಾಗೂ ಡಿಸ್ ಪ್ರಾಕ್ಸಿಯ, ADHD ಗಳೆನ್ನುವ ವಿಧಗಳಿವೆ.

1) ಡಿಸ್ಲೆಕ್ಸಿಯ (Dyslexia): ಇದೊಂದು ಬರೆಹ ಹಾಗೂ ಓದಿಗೆ ಸಂಬಂಧಿಸಿದ ಕಲಿಕಾ ನ್ಯೂನತೆಯಾಗಿದ್ದು ಇದರಿಂದ ಬಳಲುವ ಮಕ್ಕಳಿಗೆ ಅಕ್ಷರಗಳನ್ನು ಗುರುತಿಸಲು, ಓದಲು ಹಾಗೂ ಬರೆಯಲು ಸಮಸ್ಯೆಯಾಗುತ್ತದೆ. ಪದಗಳಲ್ಲಿನ ಅಕ್ಷರ ಧ್ವನಿಗಳ ಬಗ್ಗೆ ಗೊಂದಲ, ಅಕ್ಷರಗಳನ್ನು ವಿಸಂಕೇತಿಸಲು ಕಷ್ಟವಾಗುತ್ತದೆ, ಇದು ಮಗುವಿನ ಶೈಕ್ಷಣಿಕ ಭವಿಷ್ಯಕ್ಕೆ ಮಾರಕವಾಗುತ್ತದೆ.

2) ಡಿಸ್ ಗ್ರಾಫಿಯ (Dysgraphia): ಡಿಸ್ ಗ್ರಾಫಿಯ ಬರೆವಣಿಗೆಗೆ ಸಂಬಂಧಿಸಿದ ಕಲಿಕಾ ನ್ಯೂನತೆಯಾಗಿದ್ದು ಇದರಿಂದ ಬಳಲುವ ಮಕ್ಕಳಿಗೆ ಅಕ್ಷರಗಳನ್ನು ಸರಿಯಾಗಿ ಬರೆಯಲು ಸಾಧ್ಯವಾಗುವುದಿಲ್ಲ, ಕಳಪೆ ಗುಣಮಟ್ಟದ ಬರೆಹ ಅವರದಾಗಿದ್ದು, ಲಿಖಿತ ರೂಪದಲ್ಲಿ ತಮ್ಮ ವಿಚಾರ, ಅನಿಸಿಕೆಗಳನ್ನು ವ್ಯಕ್ತಪಡಿಸಲು ಅಸಮರ್ಥರಾಗಿರುತ್ತಾರೆ. ಬರೆವಾಗ ಸಾಕಷ್ಟು ಕಾಗುಣಿತ ದೋಷಗಳಾ ಗುತ್ತವೆ.




ಜಿ. ಜಗದೀಶ.
ಶಿಕ್ಷಕರು. ಶಿವಪುರ

Scan For Digital Colourful
HAMPI TIMES E-paper

3) ಡಿಸ್ ಕ್ಯಾಲುಕ್ಲಿಯ (Dyscaluclia): ಡಿಸ್ ಕ್ಯಾಲುಕ್ಲಿಯಾವು ಗಣಿತ ವಿಷಯಕ್ಕೆ ಸಂಬಂಧಿಸಿದ ಕಲಿಕಾ ನ್ಯೂನತೆಯಾಗಿದ್ದು, ಈ ನ್ಯೂನತೆಯಿಂದ ಬಳಲು ತ್ತಿರುವ ಮಕ್ಕಳು ಸಂಖ್ಯೆ ಗಳನ್ನು ಗುರುತಿ ಸುವಲ್ಲಿ, ಗಣಿತೀಯ ಸಂಬಂಧ ವನ್ನು ಅರ್ಥೈಸಿಕೊಳ್ಳುವಲ್ಲಿ ಹಾಗೂ ಕಾರಣೀಕರಿಸುವಲ್ಲಿ ವಿಫಲರಾಗುತ್ತಾರೆ. ಗಣಿತದ ಮೂಲಕ್ರಿಯೆಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ಅಳತೆ ಮಾನಗಳು, ಸ್ಥಳಾವಕಾಶದ ಅರಿವು, ಜ್ಯಾಮಿತೀಯ ರಚನೆಗಳ ಬಗ್ಗೆ ಗೊಂದಲ ಹೊಂದಿರುತ್ತಾರೆ. ಗಣಿತ ಕಲಿಕೆ ಇಂತಹ ಮಕ್ಕಳಿಗೆ ಕಬ್ಬಿಣದ ಕಡಲೆಯಾಗುತ್ತದೆ.

4) ಡಿಸ್ ಪ್ರಾಕ್ಸಿಯಾ (Dyspraxia): ಡಿಸ್ ಪ್ರಾಕ್ಸಿಯಾವು ನರ ಸಂಬಂಧೀ ನ್ಯೂನತೆಯಾಗಿದ್ದು ಸೂಕ್ಷ್ಮ ಚಲನ ಕೌಶಲಗಳ ತೊಂದರೆಯನ್ನು ಉಂಟು ಮಾಡುತ್ತದೆ. ಇದರಿಂದ ಬಾಧಿತರಾದ ಮಕ್ಕಳು ಪೆನ್ಸಿಲ್ ಹಾಗೂ ಲೇಖನಿ ಹಿಡಿತವನ್ನು ಪಡೆಯಲು ಅಸಮರ್ಥರಾಗುತ್ತಾರೆ. ಇದು ಅವರ ಬರೆವಣಿಗೆಯ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಬರೆವಣಿಗೆಯನ್ನು ನಿಧಾನಗೊಳಿಸುತ್ತದೆ.ಡಿಸ್ ಪ್ರಾಕ್ಸಿಯಾದಿಂದ ಮಕ್ಕಳ ಕಲಿಕೆ ಕುಂಠಿತವಾಗುತ್ತದೆ.




5) ಅಟೆನ್ಷನ್ ಡೆಫಿಸಿಟ್ ಹೈಪರ್ ಆಕ್ಟಿವ್ ಡಿಸಾರ್ಡರ್ (ADHD): ಇದು ಮಕ್ಕಳಲ್ಲಿ ಕಂಡು ಬರುವ ನರ ಸಂಬಂಧೀ ನ್ಯೂನತೆಯಾಗಿದ್ದು, ಅವಧಾನ ಕೊರತೆಯ ಆಕ್ರಮಣಕಾರಿ ಪ್ರವೃತ್ತಿ, ಚಿತ್ತ ಚಂಚಲತೆಗಳು, ಅತೀ ಎನಿಸುವ ತುಂಟತನ/ಚೇಷ್ಟೆ ಇವು ಇದರ ಲಕ್ಷಣಗಳಾಗಿವೆ. ಂಆಊಆ ಯಿಂದ ಬಳಲುವ ಮಕ್ಕಳು ಅಪಸಾಮಾನ್ಯ ವರ್ತನೆಗಳನ್ನು ಪ್ರದರ್ಶಿಸುತ್ತಾರೆ. ಕುಟುಂಬದಲ್ಲಿ ಪ್ರೀತಿ ಪಡೆಯದೇ ಇರುವ, ಒಂಟಿಯಾಗಿರುವ, ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳಲ್ಲಿ ಇಂತಹ ವರ್ತನೆಗಳು ಕಂಡು ಬರಬಹುದು.ಕಲಿಕಾ ನ್ಯೂನತೆಗಳು ಪೋಷಕರಿಂದ ಮಕ್ಕಳಿಗೆ ವಂಶವಾಹಿಯಾಗಿ ಬರಬಹುದು. ದೈಹಿಕ ಮತ್ತು ಮಾನಸಿಕ ಆಘಾತಗಳು, ವಿಷಯುಕ್ತ ವಸ್ತುಗಳು ತಾಯಿಯ ದೇಹದಿಂದ ಮಗುವಿಗೆ ವರ್ಗಾವಣೆಯಾಗುವ ಮೂಲಕ ಈ ನ್ಯೂನತೆಗಳು ಉಂಟಾಗುವ ಸಾಧ್ಯತೆಗಳಿವೆ.

ಇವುಗಳೊಂದಿಗೆ ಇನ್ನಿತರ ಕಲಿಕಾ ನ್ಯೂನತೆಗಳು ಸಹ ಮಕ್ಕಳಲ್ಲಿ ಕಂಡು ಬರಬಹುದು.ಮಕ್ಕಳಲ್ಲಿ ಒಂದಕ್ಕಿಂತ ಹೆಚ್ಚು ಕಲಿಕಾ ನ್ಯೂನತೆಗಳಿರಬಹುದು. ಇವುಗಳನ್ನು ಆರಂಭಿಕ ಹಂತದಲ್ಲಿ ಗುರುತಿಸಿ, ಚಿಕಿತ್ಸೆ ಕೊಡಿಸದೇ ಇದ್ದಲ್ಲಿ ಕಲಿಕೆಯಲ್ಲಿ ಹಿಂದುಳಿಯುವಿಕೆ ,ಭಾವನೆಗಳಲ್ಲಿ ಏರಿಳಿತ, ಹಾಗೂ ವರ್ತನಾತ್ಮಕ ಸಮಸ್ಯೆಗಳು ಉಂಟಾಗಿ ಅವರ ಮುಂದಿನ ಭವಿಷ್ಯಕ್ಕೆ ತೊಂದರೆಯಾಗುತ್ತದೆ. ಭಯ, ಆತಂಕ, ಅನಗತ್ಯ ಒತ್ತಡಗಳು ಮಕ್ಕಳ ಮೇಲೆ ಉಂಟಾಗುತ್ತವೆ. ಹಾಗಾಗಿ ಕಲಿಕಾ ನ್ಯೂನತೆಗಳನ್ನು ನಿವಾರಿಸಲು/ನಿಯಂತ್ರಿಸಲು ಸಾಧ್ಯವಾಗುವ ಪರಿಹಾರೋಪಾಯಗಳ ಬಗ್ಗೆ ನಾವು ತಿಳಿಯಬೇಕಾದ ಅಗತ್ಯವಿದೆ.

**ಕಲಿಕಾ ನ್ಯೂನತೆ ನಿಯಂತ್ರಿಸುವ ಪರಿಹಾರೋಪಾಯಗಳು :**

* ಬಹು ಆಯಾಮದ ಕಲಿಕೆ–ಸಂಪ್ರದಾಯಿಕ ರೀತಿಯ, ಏಕ ಮುಖದ ಬೋಧನೆಯಿಂದ ಕಲಿಕಾ ನ್ಯೂನತೆಗಳನ್ನು ನಿವಾರಿಸಲು ಅಥವಾ ನಿಯಂತ್ರಿಸಲು ಸಾಧ್ಯವಿಲ್ಲ. ಆದ್ದರಿಂದ ಭಿನ್ನ ಭಿನ್ನ ಕಲಿಕಾರ್ಥಿಗಳಿಗೆ ಅನುಗುಣವಾಗಿ ಬಹು ಆಯಾಮದ ಕಲಿಕೆಗೆ ಅವಕಾಶ ಕಲ್ಪಿಸಬೇಕು.ವಿವಿಧ ರೀತಿಯ ಸಾಧನಗಳು, ಕಲಿಕೋಪಕರಣಗಳನ್ನು ಒದಗಿಸಬೇಕು.

* **ನಿರಂತರ ಅಭ್ಯಾಸ ಮತ್ತು ಮಾರ್ಗದರ್ಶನ :** ಕಲಿಕಾ ನ್ಯೂನತೆಯನ್ನು ಹೋಗಲಾಡಿಸಲು, ಬಾಧಿತ ಮಕ್ಕಳಿಗೆ ನಿರಂತರವಾಗಿ ಕಲಿಕೆಯ ಅಭ್ಯಾಸ ಮಾಡಲು ತಿಳಿಸಬೇಕು ಹಾಗೂ ಅವರ ಕಲಿಕೆಯನ್ನು ಗಮನಿಸಿ ಸೂಕ್ತ ಸಲಹೆ–ಸೂಚನೆ ನೀಡುವುದು ಮತ್ತು ಪ್ರಶಂಸೆ ಮಾಡುವುದರ ಮೂಲಕ ಪೋಷಕರು ಹಾಗೂ ಶಿಕ್ಷಕರು ಮಾರ್ಗದರ್ಶನ ಮಾಡಬೇಕು.

* **ಪೋಷಕರು ಮತ್ತು ಶಿಕ್ಷಕರ ಬೆಂಬಲ :** ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ತಮ್ಮ ನ್ಯೂನತೆಗಳನ್ನು ಮೀರಿ ಉತ್ತಮ ಸಾಧನೆ ಮಾಡಲು ಮನೆ ಮತ್ತು ಶಾಲೆಗಳಲ್ಲಿ ಪೋಷಕರ ಹಾಗೂ ಶಿಕ್ಷಕರ ಬೆಂಬಲ ಅಗತ್ಯವಾಗಿ ಬೇಕು. ಆದ್ದರಿಂದ ಅಂತಹ ಮಕ್ಕಳಿಗೆ ಧನಾತ್ಮಕ ಮಾತುಗಳ ಮೂಲಕ ಕಲಿಯಲು ಹುರಿದುಂಬಿಸಿ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ಪೋಷಕರು ಹಾಗೂ ಶಿಕ್ಷಕರು ಪ್ರಯತ್ನಿಸಬೇಕು.

**ವೈದ್ಯಕೀಯ ನೆರವು ಮತ್ತು ಚಿಕಿತ್ಸೆ :** ಆಪ್ತ ಸಮಾಲೋಚನೆಯ ಮೂಲಕ ಮಕ್ಕಳಲ್ಲಿ ಕಂಡುಬರುವ ಅನಗತ್ಯ ಭಯ, ಆತಂಕ, ಒತ್ತಡದ ಮನಸ್ಥಿತಿಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಅದಕ್ಕೆ ಕಾರಣಗಳನ್ನು ತಿಳಿದು, ಸೂಕ್ತ ಚಿಕಿತ್ಸೆ ನೀಡಬೇಕು. ಇದಕ್ಕೆ ವೈದ್ಯರು ಹಾಗೂ ಮನಃಶಾಸ್ತ್ರಜ್ಞರ ಹಾಗೂ ಭಾಷಾ ತಜ್ಞರ ನೆರವು ಪಡೆಯಬಹುದು.

* CBT ( Cognitive Behavioural Therapy) ಥೆರಪಿ ಹಾಗೂ ABA (Applied Behaviour Analysiss ) ಥೆರಪಿಗಳ ಮೂಲಕ ಮಕ್ಕಳಲ್ಲಿ ಕಂಡುಬರುವ ವರ್ತನಾತ್ಮಕ ಸಮಸ್ಯೆಗಳಿಗೆ ಚಿಕಿತ್ಸೆ ನೀಡಬಹುದು. ಂಆಊಆ ಅಂತಹ ತೊಂದರೆಗಳನ್ನು ವೈದ್ಯಕೀಯ ಚಿಕಿತ್ಸೆ ಮೂಲಕ ನಿವಾರಿಸಬಹುದು.

* ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ತಮ್ಮದೇ ವೇಗದಲ್ಲಿ ಕಲಿಯಲು ಅವಕಾಶ ನೀಡಿ ಅವರಿಗೆ ಸೂಕ್ತ ಸನ್ನಿವೇಶ ಹಾಗೂ ಕಲಿಕಾ ವಾತಾವರಣವನ್ನು ರೂಪಿಸಬೇಕು. ಅವರೊಂದಿಗೆ ತಾಳ್ಮೆ ಹಾಗೂ ಪ್ರೀತಿಯಿಂದ ವರ್ತಿಸಬೇಕು.

ಒಟ್ಟಾರೆಯಾಗಿ ಕಲಿಕಾ ನ್ಯೂನತೆ ಮಕ್ಕಳಿಗೆ ಶಾಪವಾಗದಂತೆ, ನ್ಯೂನತೆಗಳನ್ನು ಹೊಂದಿರುವ ಮಕ್ಕಳಿಗೆ ಅಗತ್ಯವಾದ ವೈದ್ಯಕೀಯ ನೆರವು, ಪೋಷಕರ ಪ್ರೀತಿ, ಶಿಕ್ಷಕರ ಮಾರ್ಗದರ್ಶನ ಹಾಗೂ ಸಹಕಾರ ದೊರೆಯುವಂತೆ ಮಾಡುವುದರ ಮೂಲಕ ಇತರರಂತೆ ಅವರೂ ಸಹ ನ್ಯೂನತೆಗಳನ್ನು ಮೀರಿ ಸಾಧಿಸಲು,ತಮ್ಮ ಜೀವನದಲ್ಲಿ ಉತ್ತಮ ಸಾಧಕರಾಗಲು ಸಾಧ್ಯವಿದೆ.ಈ ನಿಟ್ಟಿನಲ್ಲಿ ಪೋಷಕರು ಮತ್ತು ಶಿಕ್ಷಕರಾಗಿ ನಾವೆಲ್ಲರೂ ಆ ಮಕ್ಕಳ ಅಭ್ಯುದಯಕ್ಕೆ ನಿರಂತರ ಪ್ರಯತ್ನಿಸೋಣ.



ಕರ್ನಾಟಕ ಆಡಳಿತಾ ಸುಧಾರಣಾ ಆಯೋಗದ ಅಧ್ಯಕ್ಷರಾದ ಮಾಜಿ ಸಚಿವ ಆರ್.ವಿ.ದೇಶಪಾಂಡೆ ಅವರು ಆಯೋಗದ 8 ನೇ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು.




ರಾಜ್ಯದ ನೂತನ ಪೋಲಿಸ್ ಮಹಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಹಿರಿಯ ಐಪಿಎಸ್ ಅಧಿಕಾರಿ ಸಲೀಂ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿಸಿದರು. ಪೊಲೀಸ್ ಮಹಾ ನಿರ್ದೇಶಕರಾಗಿ ಸೇವೆಯಿಂದ ನಿವೃತ್ತರಾದ ಅಲೋಕ್ ಮೋಹನ್ ಅವರಿಗೆ ಮುಖ್ಯಮಂತ್ರಿಗಳು ಶುಭ ಹಾರೈಸಿದರು. ಗೃಹ ಸಚಿವ ಡಾ. ಜಿ. ಪರಮೇಶ್ವರ ಹಾಜರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ತುಂಗಭದ್ರಾ ಡ್ಯಾಂ



ಹರಿಯುವ ನದಿಯು ಚಂದ
ನದಿಯ ನೀರು ಅಂದ
ಸಿಹಿಯಾದ ನೀರು ಇರುವ
ತುಂಗಾ ಭದ್ರಾ ಚಂದ।

ತುಂಗಭದ್ರಾ ಡ್ಯಾಂ ಚಂದ
ಡ್ಯಾಂ ಮಿನ ನೋಟ ಅಂದ
ಡ್ಯಾಂ ನಿಂದ ಬೀಳೋ ನೀರು
ಕಣ್ಣಿಗೆ ನೋಡಲು ಚೆಂದ।

ಈ ಕಡೆ ಇಂದ್ರ ಚಂದ
ಆ ಕಡೆ ವೈಕುಂಠ ಅಂದ
ಎರಡರ ನಡುವೆ ಇರುವ
ನಮ್ಮ ಕೈಲಾಸ ಚಂದ।

ಗುಲಾಬಿಯ ಹೂವು ಚಂದ
ಹೂವಿನ ವಾಸನೆ ಅಂದ
ಹೂವಿಗೆ ಮಧುರ ಕೊಡುವ
ನಮ್ಮ ಪಂಪಾವನ ಚಂದ।

ಡ್ಯಾಂ ಮಿನ ರಸ್ತೆ ಚಂದ
ರಸ್ತೆಯ ಸುತ್ತು ಅಂದ
ರಸ್ತೆಯಿಂದ ಸುತ್ತಿ ಬರುವ
ನಮ್ಮ ವಾಹನ ಚಂದ।

ಡ್ಯಾಂ ಮಿನ ಮನೆಯು ಚಂದ
ಮನೆಯಲಿ ಮಕ್ಕಳು ಅಂದ
ಮಕ್ಕಳು ಆಡಿ ನಲಿವ
ನಮ್ಮ ಮನೆಯು ಚಂದ।

– ಚಂದ್ರಶೇಖರಯ್ಯ ರೋಣದಮಠ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಜಗದ ಜಗಲಿಯ ಮೇಲೆ ಕನ್ನಡದ ಬಾನು-ದೀಪ

## ಕನ್ನಡದ ಕಿರೀಟಕ್ಕೆ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಗರಿ

### ಪ್ರಶಸ್ತಿಯ ಮೊತ್ತ 50,000 ಪೌಂಡ್, ಭಾರತೀಯ ರೂಪಾಯಿಗಳಲ್ಲಿ ಸರಿಸುಮಾರು ರೂ.57.52 ಲಕ್ಷ.






ಕನ್ನಡದ 'ಎದೆಯ ಹಣತೆ' (Heart Lamp) ಈಗ ಜಗದೆಲ್ಲರೆದೆಯ ಬೆಳಗುವ ಹಣತೆಯಾಗಿದೆ. 'ಹಸೀನಾ ಮತ್ತು ಇತರ ಕಥೆಗಳು' ಸಂಕಲನದಿಂದ ಆಯ್ದ ಹನ್ನೆರಡು ಸಣ್ಣ ಕಥೆಗಳ ಸಂಕಲನ 'ಎದೆಯ ಹಣತೆ' ಇಂಗ್ಲಿಷ್‌ನಲ್ಲಿ 'ಹಾರ್ಟ್ ಲ್ಯಾಂಪ್ ಎಂದು ಕೊಡಗಿನ ದೀಪಾ ಭಾಸ್ತಿಯವರ ಸಮರ್ಪಕ, ಸಮರ್ಥ ಅನುವಾದದ ಮೂಲಕ ಕನ್ನಡಕ್ಕೆ ಮೊದಲ ಅಂತರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿಯ ಗರಿ ಮೂಡಿರುವುದು ನಿಜಕ್ಕೂ ಸಮಸ್ತ ಕನ್ನಡಿಗರೆಲ್ಲರಿಗೆ ಅತ್ಯಂತ ಹೆಮ್ಮೆಯ ಹಾಗೂ ಸಂಭ್ರಮದ ಕ್ಷಣಗಳಾಗಿವೆ. ಕನ್ನಡದ ಸೃಜನಶೀಲ, ಸಂವೇದನಾಶೀಲ, ಜೀವಪರ ಕಾಳಜಿಗಳು ಜಾಗತಿಕ ಮಟ್ಟದಲ್ಲಿ ವ್ಯಾಪಿಸುವಲ್ಲಿ ಕನ್ನಡದ ಹಿರಿಯ ಸಾಹಿತಿ ಬಾನುಮುಷ್ತಾಕ್ ಮತ್ತು ಕೊಡಗಿನ ದೀಪಾ ಭಾಸ್ತಿಯವರ ಪ್ರಯತ್ನ ಕೊಡುಗೆ ಅನನ್ಯವಾದುದು ಹಾಗೂ ವಿಶ್ವದಾ ದ್ಯಂತ ಹಬ್ಬಿರುವ ಕನ್ನಡಿಗರು ಮತ್ತು ಭಾರತೀ ಯರು ಸದಾ ನೆನಪಿನಲ್ಲಿಡುವಂತಹದ್ದು.

ಕನ್ನಡದ ಹಿರಿಯ ಲೇಖಕಿ, ಪತ್ರಕರ್ತೆ ಹಾಗೂ ವಕೀಲೆಯಾಗಿ ಕಾರ್ಯನಿರ್ವಹಿಸುತ್ತಿರುವ ಬಾನು ಮುಷ್ತಾಕ್ ಹಾಸನ ಮೂಲದವರು. ಜನನ: 03–04–1954. ಹುಟ್ಟು ಹೋರಾಟಗಾರ್ತಿಯಾಗಿ 'ಲಂಕೇಶ್ ಪತ್ರಿಕೆ'ಯಲ್ಲಿ ವರದಿಗಾರ್ತಿಯಾಗಿ ಕೆಲಸ ಪ್ರಾರಂಭಿಸಿದವರು. ಬಾಲ್ಯ ದಿಂದಲೇ ತಮ್ಮ ಸುತ್ತಮುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಸೃಜನ ಶೀಲವಾಗಿ ಆಲೋ ಚಿಸಿ ಬರಹಕ್ಕಿಳಿಸುವ ತಿಳಿಸುವ ಪರಿಪಾಠವನ್ನು ರೂಢಿಸಿ ಕೊಂಡರು. ಎಪ್ಪತ್ತರ ದಶಕದಲ್ಲಿ ಬಂಡಾಯ ಸಂಘಟನೆಯ ಒಡನಾಟದಿಂದ ತಮ್ಮ ಬರವಣಿಗೆಯಲ್ಲಿ ಸ್ಪಷ್ಟತೆಯನ್ನು ಅಳವಡಿಸಿ ಕೊಂಡರು. ಮುಸ್ಲಿಂ ಸಮುದಾ ಯದ ಹೆಣ್ಣು ಅನುಭವಿಸುತ್ತಿರುವ ಕೌಟುಂಬಿಕ ನೋವು, ಹಿಂಸೆ, ಕಟ್ಟುಪಾಡುಗಳನ್ನು, ತಲ್ಲಣಗಳನ್ನು ತಮ್ಮ ಕಥೆಗಳ ದ್ರವ್ಯವಾಗಿಸಿಕೊಂಡು ಮಹಿಳಾ ಸಂವೇದನೆಯನ್ನು ಸಮರ್ಥವಾಗಿ ನಿರೂಪಿಸಿದ್ದಾರೆ. ಅಂತಹ ಸಂದರ್ಭಗಳಲ್ಲಿ ತಮ್ಮದೇ ಸಂಪ್ರದಾಯನಿಷ್ಠ ಸಮುದಾಯದಿಂದ ಹಲವು ಪ್ರತಿರೋಧಗಳನ್ನು ಎದುರಿಸಬೇಕಾದರೂ ತಮ್ಮ ನಿಲುವನ್ನು ಅಚಲವಾಗಿ ನೆಮ್ಮಿಕೊಂಡು ಬರವಣಿಗೆಯಲ್ಲಿ ತೊಡಗಿದರು. ಅನೇಕ ಪ್ರಗತಿಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರ ಪರಿಣಾಮವಾಗಿ ಸ್ಥಾಪಿತವರ್ಗ ನಡೆಸುತ್ತಿದ್ದ ಶೋಷಣೆಯ ವಿರುದ್ಧ, ಮೂಲಭೂತವಾದದ ವಿರುದ್ಧ, ಪುರುಷಪ್ರಾಧಾನ್ಯತೆಯ ವಿರುದ್ಧ, ಅಸಮಾನತೆಯ ವಿರುದ್ಧ ದನಿಯೆತ್ತಿದ್ದಾರೆ.

ಬಾನು ಮುಷ್ತಾಕ್ ಅವರ ಮಾತೃಭಾಷೆ ದಖನಿ ಉರ್ದು. ಅರಬ್ಬಿಯನ್ನೂ ಕಲಿತರು. ಬಳಕೆಯ ಭಾಷೆ ಕನ್ನಡ. ಸಂಪರ್ಕ ಭಾಷೆ ಇಂಗ್ಲಿಷ್–ಹೀಗೆ ಬಹು ಭಾಷೆಗಳನ್ನು ಬಲ್ಲವರಾಗಿದ್ದಾರೆ. ಸಾಹಿತ್ಯದ ಅಭಿವ್ಯಕ್ತಿಗಾಗಿ ಬಳಸುತ್ತಿರುವುದು ಕನ್ನಡ ಭಾಷೆ. ಕನ್ನಡ ಭಾಷೆಯ ಲಯ, ಸೊಗಡು, ಸತ್ವ, ಬನಿಯನ್ನು ತಮ್ಮ ಬರಹಗಳಲ್ಲಿ ಅತ್ಯಂತ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ನಡು ನಡುವೆ ಉರ್ದುವಿನ ಸೊಗಸು ಮಿಳಿತಗೊಂಡಿರುವುದರಿಂದ ಅವರ ಕತೆಗಳಿಗೆ ಒಂದು ಬಗೆಯ ಅನನ್ಯತೆ ಪ್ರಾಪ್ತವಾಗಿದೆ. ಹೆಜ್ಜೆ ಮೂಡಿದ ಹಾದಿ, ಬೆಂಕಿ ಮಳೆ, ಎದೆಯ ಹಣತೆ, ಸಫೀರ, ಬಡವರ ಮಗಳು ಹೆಣ್ಣಲ್ಲ, ಇಬ್ಬನಿಯ ಕಾವು, ಹಸೀನಾ ಮತ್ತು ಇತರ ಕಥೆಗಳು–ಇವು ಅವರ ಕಥಾ ಸಂಕಲನಗಳು. 'ಒದ್ದೆಗಣ್ಣಿನ ಬಾಗಿನ' ಕವನ ಸಂಕಲನ. ಕುಬ, ಬಡವರ ಮಗಳು ಹೆಣ್ಣಲ್ಲ' ಕಾದಂಬರಿ. 'ಹೂ ಕಣಿವೆಯ ಚಾರಣ' ಪ್ರಬಂಧ ಸಂಕಲನ. ಕೌಟುಂಬಿಕ ತಡೆ ಕಾಯ್ದೆ ಹಾಗೂ ಪಾರ್ಸಿಯ 'ತಾರಿಕ್–ಎ–ಫೇರಿಸ್ತಾ' ಅನ್ನು ಉರ್ದುವಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಒಮ್ಮೆ ಹೆಣ್ಣಾಗು ಪ್ರಭುವೇ' ಮೊದಲಾದ ಕಥೆಗಳು ವಿಶ್ವವಿದ್ಯಾಲಯದ ಪಠ್ಯಗಳಾಗಿವೆ. 'ಕರಿನಾಗರಗಳು' ಕಥೆಯನ್ನು ಆಧರಿಸಿ ಚಲನಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ 'ಹಸೀನಾ' ಹೆಸರಿನಲ್ಲಿ ಚಲನಚಿತ್ರವಾಗಿಸಿದರು. ಇದಕ್ಕೆ ಕಥೆ, ವಸ್ತ್ರಾಲಂಕಾರ, ಉತ್ತಮ ನಟನೆ ಈ ಮೂರು ವಿಭಾಗಗಳಲ್ಲಿ ರಾಷ್ಟ್ರ ಪ್ರಶಸ್ತಿಗಳು ಸಂದಿವೆ. ಅವರ ಸಾಹಿತ್ಯ ಸೇವೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಿ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ, ಶ್ರವಣ ಬೆಳಗೊಳ ಮಹಾಮಸ್ತ ಕಾಭಿಷೇಕ ಪ್ರಶಸ್ತಿ, ಪೆನ್ ಇಂಗ್ಲಿಶ್ ಅನುವಾದ ಪ್ರಶಸ್ತಿ, ಹಾಗೂ ಹಲವು ದತ್ತಿ ಪ್ರಶಸ್ತಿಗಳು ಸಂದಿವೆ. ಅವರ ಕಥೆಗಳು ಉರ್ದು, ಹಿಂದಿ, ತಮಿಳು ಮಲೆಯಾಳಂಗಳಿಗೆ ಅನುವಾದ ಗೊಂಡಿವೆ.

ಬರವಣಿಗೆಯನ್ನು ಪ್ರಾರಂಭಿಸಿದ ಮೊದಮೊದಲ ದಿನಗಳಲ್ಲಿ ಪತ್ರಿಕೆಗಳಿಗೆ ಲೇಖನಗಳನ್ನು ಕಳಿಸಬೇಕಾದ ಸಂದರ್ಭಗಳಲ್ಲಿ 'ಕಾಗದದ ಒಂದೇ ಮಗ್ಗುಲಿಗೆ ಬರೆಯಬೇಕು' ಎಂಬ ಮಾತು ಮೂಡಿಸಿದ ಗೊಂದಲ, ನಂತರ 'ಈಗ ಬರವಣಿಗೆ ಎಂಬುದು ಉಸಿರಾಟದಷ್ಟೇ ಸಹಜವಾಗಿ ಬಿಟ್ಟಿದೆ, ಆರಂಭದ ದಿನಗಳಲ್ಲಿ ಕೋಪದ ಅಭಿವ್ಯಕ್ತಿಗಾಗಿ ಸಾಮಾಜಿಕ ಕೌಟುಂಬಿಕ ಅನ್ಯಾಯಗಳನ್ನು ಪ್ರತಿಭಟಿಸುವುದಕ್ಕಾಗಿ ಬರೆಯುತ್ತಿದ್ದ ಆಕ್ರೋಶ ಪೂರಿತ ಬರವಣಿಗೆ ನಂತರ ಒಂದು ಹದಕ್ಕೆ ಬಂದು ಸಂಯಮದ ಬರವಣಿಗೆಯಾಗಿ ಪರಿವರ್ತನೆಯಾಗಿದೆ. ಆದರೂ ಹೇಳಬೇಕಾದ ವಿಚಾರವನ್ನು ಕಲಾತ್ಮಕವಾಗಿ ಹೇಳುವು ದನ್ನು ಎಂದಿಗೂ ಬಿಟ್ಟುಕೊಟ್ಟಿಲ್ಲ' ಎನ್ನುವ ಅವರ ಮಾತುಗಳಲ್ಲಿ ಸೃಜನಶೀಲ ಬರೆವಣಿಗೆಯ ಹಾದಿಯನ್ನು ಗುರುತಿಸಬಹುದು.

**Heart Lamp:** (ಎದೆಯ ಹಣತೆ) ಬಾನು ಮುಷ್ತಾಕ್ ಅವರ ಆಯ್ದ ಹನ್ನೆರಡು ಕಥೆಗಳ ಸಂಕಲನ. 2025ರಲ್ಲಿ ದೀಪಾ ಭಾಸ್ತಿಯವರು ಇದನ್ನು Heart Lamp: (ಹಾರ್ಟ್ ಲ್ಯಾಂಪ್) ಎಂದು ಇಂಗ್ಲಿಷಿಗೆ ಅನುವಾದಿಸಿದ್ದಾರೆ ಇದರಲ್ಲಿ ಶಾಯಿಸ್ತಾ ಮಹಲ್‌ನ ಕಲ್ಲು ಚಪ್ಪಡಿಗಳು (Stone Steps for Shaista Mahal), ಬೆಂಕಿ ಮಳೆ (Fire Rain), ಕರಿನಾಗರಗಳು (Black Cobras), ಹೃದಯ ತೀರ್ಪು (A Decision of the Heart), ಕೆಂಪು ಲುಂಗಿ (Red Lungi), ಎದೆಯ ಹಣತೆ (Heart Lamp), ಹೈ ಹೀಲ್ಡ್ ಶೂ (High Heeled Shoe), ಮೆಲುದನಿಗಳು (Soft Wisphers), ಸ್ವರ್ಗವೆಂದರೆ (A Taste of Heaven), ಕಫಾನ್ (The Shroud), ಅರಬ್ಬಿ ಮೇಷ್ಟ್ರು ಮತ್ತು ಗೋಬಿ ಮಂಚೂರಿ (The Arabic Teacher and Gobi Manchuri) ಮತ್ತು ಒಮ್ಮೆ ಹೆಣ್ಣಾಗು ಪ್ರಭುವೇ (Be a Woman once, oh God!) ಎಂಬ ಕತೆಗಳಿವೆ.

**ಬೂಕರ್ ಪ್ರಶಸ್ತಿ:** 1969ರಲ್ಲಿ ಕಥಾ/ಗದ್ಯಸಾಹಿತ್ಯಕ್ಕೆ ಪ್ರೋತ್ಸಾಹಿಸುವ ಸಲುವಾಗಿ ಪ್ರಾರಂಭವಾದ ಪ್ರಶಸ್ತಿ. 2002ರಿಂದ 2019ರವರೆಗೆ ಮ್ಯಾನ್‌ಬುಕರ್ ಪ್ರಶಸ್ತಿಯನ್ನು ಪ್ರತಿವರ್ಷ ಇಂಗ್ಲಿಷ್‌ನಲ್ಲಿ ಬರೆದ ಯುನೈಟೆಡ್ ಕಿಂಗ್ಡಮ್ ಅಥವಾ ಐರ್ಲೆಂಡ್‌ನಲ್ಲಿ ಪ್ರಕಟಿತವಾದ ಶ್ರೇಷ್ಠ ಸಾಹಿತ್ಯ ಕೃತಿಗೆ ನೀಡಲಾಗುತ್ತಿತ್ತು. ಪ್ರಶಸ್ತಿಯ ಮೊತ್ತ 50,000 ಪೌಂಡ್. ಪ್ರಶಸ್ತಿಯನ್ನು ಪ್ರಾರಂಭಿಸಿದ ದಿನಗಳಲ್ಲಿ ಕಾಮನ್ವೆಲ್, ಐರಿಷ್, ಸೌತ್ ಆಫ್ರಿಕಾಗಳ ಪೌರತ್ವ ಹೊಂದಿದವರು, ಕಾದಂಬರಿಕಾರರು ಅರ್ಹರಾಗಿದ್ದರು. 2014ರಲ್ಲಿ ಅದರ ವ್ಯಾಪ್ತಿಯನ್ನು ವಿಸ್ತರಿಸಿ ಇಂಗ್ಲಿಷ್ ಭಾಷೆಯಲ್ಲಿ ರಚಿತವಾದ ಯಾವುದೇ ಕಾದಂಬರಿ ಅರ್ಹವೆಂದು ಪರಿಗಣಿಸಲಾಗುತ್ತಿತ್ತು. ಮ್ಯಾಕೊನೆಲ್ ಲಿಮಿಟೆಡ್‌ನ ಬುಕರ್ ನಂತರ ಮ್ಯಾನ್ ಗ್ರೂಪ್, ತರುವಾಯ ಕ್ರ್ಯಾಂಕ್‌ಸ್ಟಾರ್ಟ್‌ರಿಂದ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ. ಈ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿ ಸಾಹಿತಿಗಳು, ಪ್ರಕಾಶಕರು, ಪತ್ರಕರ್ತರು, ರಾಜಕಾರಣಿಗಳು, ನಟರು, ಕಲಾವಿದರು, ಸಂಗೀತಗಾರರು ಇವರಲ್ಲಿ ಐವರ ಒಂದು ಸಮಿತಿಯನ್ನು ನೇಮಕ ಮಾಡಲಾಗುತ್ತದೆ. ಸ್ವೀಕೃತವಾದ ಕೃತಿಗಳನ್ನು ಹಲವು ಹಂತಗಳಲ್ಲಿ ಪರಿಶೀಲಿಸಿ ಅಂತಿಮ ಸುತ್ತಿಗೆ ಆರು ಕೃತಿಗಳನ್ನು ಆಯ್ಕೆ ಮಾಡಲಾಗುತ್ತದೆ ಅವುಗಳಲ್ಲಿ ಒಂದು ಕೃತಿಗೆ ಬೂಕರ್ ಪ್ರಶಸ್ತಿಯನ್ನು ನೀಡಲಾಗುತ್ತದೆ. ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ಇಂಗ್ಲಿಷ್‌ಗೆ ಅನುವಾದಗೊಂಡ ಯುಕೆ/ ಐರ್‌ಲ್ಯಾಂಡ್‌ನಲ್ಲಿ ಪ್ರಕಟವಾದ ಕಥೆಗಳ ಸಂಕಲನ ಕೂಡ ಅರ್ಹವಾಗುತ್ತದೆ. ಮೂಲಕಥೆಗಾರರು ಮತ್ತು ಅನುವಾದಕರಿಬ್ಬರಿಗೂ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

### ಹಿರಿಯ ಸಾಹಿತಿಗಳಿಗೆ ಬೂಕರ್ ಪ್ರಶಸ್ತಿ ಲಭಿಸಬೇಕಾಗಿತ್ತು

**ಕನ್ನಡ ಸಾಹಿತ್ಯದ ಶ್ರೇಷ್ಠತೆಯನ್ನು, ಶ್ರೀಮಂತಿಕೆಯನ್ನು ಗಮನಿಸಿದಾಗ ಕುವೆಂಪು, ಬೇಂದ್ರೆ, ಮಾಸ್ತಿ, ಪುತಿನ, ಅಡಿಗ, ಕಂಬಾರ, ಅನಂತಮೂರ್ತಿ ಮೊದಲಾದ ಹಲವು ಹಿರಿಯ ಸಾಹಿತಿಗಳಿಗೆ ಬೂಕರ್ ಪ್ರಶಸ್ತಿ ಲಭಿಸಬೇಕಾಗಿತ್ತು ಎನಿಸುತ್ತದೆ. ಆದರೆ ಇಂದಿನಂತೆ ಜಾಗತಿಕ ಮಟ್ಟದಲ್ಲಿ ವ್ಯಾಪಿಸಲಿಲ್ಲ. ಇಂಗ್ಲೀಷ್‌ಗೆ ಅನುವಾದಗಳು ಆಗಲಿಲ್ಲ. ಇಂಗ್ಲಿಷ್ ಸಂಪರ್ಕ ಭಾಷೆ ಯಾಗಿದ್ದು ಕಾಲ–ದೇಶವನ್ನು ಮೀರುವ ಕೆಲಸವನ್ನು ಇಂದು ಕನ್ನಡ ಅಗತ್ಯವಾಗಿ ಮಾಡಬೇಕಾಗಿದೆ. ಇದಕ್ಕೆ ಅನುವಾದ ಬಹಳ ಮುಖ್ಯ. ಕನ್ನಡ ಭಾಷೆಯ ಸತ್ವ ಅಗಾಧವಾದದ್ದು, ಅದು ಜಾಗತಿಕವಾಗಿ ವ್ಯಾಪ್ತವಾಗ ಬೇಕಾದರೆ ಅನುವಾದ ಅತ್ಯಗತ್ಯ. ಮನುಷ್ಯ ಸಂಬಂಧಗಳ, ಜೀವಪರ ಚಿಂತನೆಗಳು ಕನ್ನಡ ಸಾಹಿತ್ಯ ದಲ್ಲಿ ಸಮೃದ್ಧ ಹಾಗೂ ವ್ಯಾಪಕವಾಗಿವೆ. ಬಾನು ಮುಷ್ತಾಕ್ ಅವರಿಗೆ ಲಭಿಸಿರುವ ಮೊಟ್ಟ ಮೊದಲ ಅಂತರಾಷ್ಟ್ರೀಯ ಪ್ರಶಸ್ತಿ ಕನ್ನಡಕ್ಕೆ ಬಹುದೊಡ್ಡ ಕೊಡುಗೆಯಾಗಿದೆ. ಪ್ರಶಸ್ತಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಬಾನು ಮುಷ್ತಾಕ್ ಅವರು "ಯಾವ ಕಥೆಯೂ ಸಣ್ಣದಲ್ಲ, ಅನುಭವದ ವಸ್ತ್ರದಲ್ಲಿರುವ ಪ್ರತಿ ಎಳೆಯೂ ಇಡೀ ಕತೆಯ ತೂಕವನ್ನು ಹೊಂದಿರುತ್ತದೆ ಎಂಬ ನಂಬಿಕೆಯಿಂದಲೇ ಈ ಪುಸ್ತಕ ರೂಪುಗೊಂಡಿತು. ಈ ಕ್ಷಣವು ಸಾವಿರಾರು ಮಿಂಚುಹುಳುಗಳು ಒಂದೇ ಆಕಾಶದಲ್ಲಿ ಬೆಳಕನ್ನು ಹರಡಿದಂತೆ ಭಾಸವಾಗುತ್ತಿದೆ." ಎಂದು ತಮ್ಮ ಕತೆಗಳ ಬೆಳವಣಿಗೆಯ ಸ್ವರೂಪ ಹಾಗೂ ಪ್ರಶಸ್ತಿ ಸ್ವೀಕರಿಸಿದ ಗಳಿಗೆಯ ಸಂತಸವನ್ನು ಹಂಚಿಕೊಂಡಿದ್ದಾರೆ. ಕನ್ನಡದ ಹಿರಿಮೆ–ಗರಿಮೆಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ ಇಬ್ಬರಿಗೂ ನಾಡಿನೆಲ್ಲರ ಹೃತ್ಪೂರ್ವಕ ಅಭಿನಂದನೆಗಳು ಸಲ್ಲುತ್ತವೆ.**



ಡಾ.ಬಿ.ಜಿ. ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು.

Scan For Digital Colourful
HAMPI TIMES E-paper

# ಆಮೆಗಳ ಸಂರಕ್ಷಣೆಯೂ ಆದ್ಯತೆಯ ವಿಷಯವಾಗಲಿ

## ಇಂದು ವಿಶ್ವ ಆಮೆ ದಿನ

■ ರಾಜು. ಭೂಶೆಟ್ಟಿ, ಹುಬ್ಬಳ್ಳಿ



ವಿಶ್ವದಲ್ಲಿ ಕೆಲವು ಆಮೆ ಪ್ರಭೇದಗಳು ಅಳಿವಿನಂಚಿಗೆ ತಲುಪುತ್ತಿರುವುದರಿಂದ ಹಾಗೂ ಅವುಗಳನ್ನು ರಕ್ಷಿಸುವ ಉದ್ದೇಶಕ್ಕಾಗಿ, ಆಮೆಗಳ ರಕ್ಷಣೆ ಎಂದರೆ ಅವುಗಳ ಕಣ್ಮರೆಯಾಗುತ್ತಿರುವ ಆವಾಸ ಸ್ಥಾನಗಳನ್ನು ಸಂರಕ್ಷಿಸುವ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ–23ರಂದು ವಿಶ್ವ ಆಮೆ ದಿನವನ್ನಾಗಿ ಆಚರಿಸಲಾಗುತ್ತದೆ. ಅಮೆರಿಕನ್ ಟಾರ್ಟಾಯ್ಸ ರೆಸ್ಕ್ಯೂ ಸಂಸ್ಥೆ 1990ರಲ್ಲಿ ಈ ದಿನವನ್ನು ಹುಟ್ಟು ಹಾಕಿತು. ಮುಂದೆ 2000ನೇ ಇಸ್ವಿಯಲ್ಲಿ ಈ ದಿನವನ್ನು ಸ್ಥಾಪಿಸಲಾಯಿತು. ಪ್ರತಿ ವರ್ಷ ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸಲಾಗುವ ಈ ದಿನವನ್ನು ಈ ವರ್ಷ ನೃತ್ಯ ಮಾಡುವ ಆಮೆಗಳು ರಾಕ್(ಡ್ಯಾನ್ಸಿಂಗ್ ಟರ್ಟಲ್ಸ್ ರಾಕ್) ಎಂಬ ಥೀಮ್‌ನಿಂದ ಆಚರಿಸಲಾಗುತ್ತಿದೆ. ಈ ಥೀಮ್ ಮುಖ್ಯವಾಗಿ ಆಮೆಗಳು ಮತ್ತು ಅವುಗಳ ಆವಾಸಸ್ಥಾನವನ್ನು ರಕ್ಷಿಸುವಂತೆ ಜನರನ್ನು ಪ್ರೋತ್ಸಾಹಿಸುತ್ತದೆ. ಈ ಆಮೆಗಳು ವಿಶ್ವದ ಅತ್ಯಂತ ಹಳೆಯ ಸರೀಸೃಪ ಗುಂಪುಗಳಿಗ ಸೇರಿದ ಪ್ರಾಣಿಗಳಾಗಿವೆ. ಈ ಭೂಮಿಯ ಮೇಲಿನ ಜೀವಿಗಳಲ್ಲಿ ಆಮೆಯ ಜೀವಿತಾವಧಿ ಅತ್ಯಂತ ದೀರ್ಘವಾಗಿದೆ. ಟರ್ಟಲ್ಸ ಎಂದು ಕರೆಯಲಾಗುವ ಆಮೆಗಳು ಹೆಚ್ಚು ಕಾಲ ನೀರಿನಲ್ಲೇ ವಾಸಿಸಿದರೆ, ಟಾರ್ಟಾಯ್ಸ ಎಂದು ಕರೆಯಲಾಗುವ ಆಮೆಗಳು ನೆಲದ ಮೇಲೆ ವಾಸಿಸುತ್ತವೆ. ಇವುಗಳು ಸುಮಾರು 150 ರಿಂದ 200 ವರ್ಷಗಳವರೆಗೆ ಬದುಕುವ ಸಾಮರ್ಥ್ಯವನ್ನು ಹೊಂದಿವೆ. ಆಮೆಗಳ ವಾಸಸ್ಥಾನ ತುಂಬ



ಕುತೂಹಲಕಾರಿಯಾಗಿದ್ದು, ಕೆಲವು ಸಿಹಿ ನೀರಿನಲ್ಲಿ ವಾಸಿಸಿದರೆ, ಇನ್ನು ಕೆಲವು ಸಮುದ್ರ ನೀರಿನಲ್ಲಿ ವಾಸಿಸುತ್ತವೆ. ಆಮೆಗಳು ಭೂಮಿಯ ಕಾಂತಕ್ಷೇತ್ರವನ್ನೇ ಬಳಸಿಕೊಂಡು ಸಂಚರಿಸುತ್ತವೆ ಮತ್ತು ಮರಿಗಳಿಗೆ ಗೂಡು ಕಟ್ಟಲು ಅವು ಮೊಟ್ಟೆಯೊಡೆದ ಕಡಲತೀರಕ್ಕೆ ಹಿಂತಿರುಗುತ್ತವೆ. ಇವುಗಳು ತಮ್ಮ ಕರಾವಳಿ ಆಹಾರ ತಾಣಗಳು ಮತ್ತು ಕಡಲತೀರಗಳಲ್ಲಿ ಗೂಡುಕಟ್ಟುವ ಸ್ಥಳಗಳ ನಡುವೆ ಪ್ರಯಾಣಿಸುವಾಗ ಪರಿಸರ ವ್ಯವಸ್ಥೆಗಳು ಅಭಿವೃದ್ಧಿ ಹೊಂದಲು ಸಹಾಯ ಮಾಡುವ ಅತ್ಯಂತ ಅಗತ್ಯವಿರುವ ಪೋಷಕಾಂಶಗಳನ್ನು ಸಾಗಿಸುತ್ತವೆ. ಆಮೆ ಚಿಪ್ಪುಗಳು 50 ವಿಭಿನ್ನ ಮೂಳೆಗಳಿಂದ ಮಾಡಲ್ಪಟ್ಟಿದ್ದು, ಅವುಗಳು ಒಟ್ಟಿಗೆ ಬೆಸೆದುಕೊಂಡಿವೆ. 18ನೇ ಶತಮಾನ 'ದಿಂದಲೂ ಆಭರಣಗಳು ಮತ್ತು ಸಂಗ್ರಹಿಸ ಬಹುದಾದ ವಸ್ತುಗಳಾಗಿ ಅವುಗಳ ಜನಪ್ರಿಯ ತೆಯು ಆಮೆಗಳ ಉಳಿವಿಗೆ ಅಪಾಯವನ್ನುಂಟು ಮಾಡಿದೆ. ಸಮುದ್ರ ಆಮೆಗಳಲ್ಲಿ ಏಳು ಪ್ರಭೇದಗಳಿವೆ; ಅವುಗಳೆಂದರೆ ಹಾಕ್ಸ್‌ಬಿಲ್, ಲಾಗರ್‌ಹೆಡ್, ಲೆದರ್‌ಬ್ಯಾಕ್, ಆಲಿವ್ ರಿಡ್ಲಿ, ಗ್ರೀನ್, ಫ್ಲಾಟ್‌ಬ್ಯಾಕ್ ಮತ್ತು ಕೆಂಪ್ಸ್‌ರಿಡ್ಲಿ. ಈ ಏಳು ಪ್ರಭೇದಗಳಲ್ಲಿ ಆರು ಪ್ರಭೇದಗಳು ಅಳಿವಿನಂಚಿನಲ್ಲಿವೆ. ಇವುಗಳು ಬಹಳಷ್ಟು ಬೆರೆಯುವ ಪ್ರಾಣಿಗಳಾಗಿದ್ದು, ದೊಡ್ಡ ಗುಂಪುಗಳಲ್ಲಿ ವಿಶಾಲ ಪ್ರದೇಶಗಳಲ್ಲಿ ಪ್ರಯಾಣಿಸುವುದನ್ನು ಇಷ್ಟಪಡುತ್ತವೆ. ಮಾನವನ ಹಸ್ತಕ್ಷೇಪದಿಂದ ಅಪಾಯಕ್ಕೊಳಗಾಗಿರುವ ಹಲವಾರು ಪ್ರಾಣಿಗಳಲ್ಲಿ ಆಮೆಯೂ ಒಂದು. ಆಮೆಗಳಿಂದ ಹೊರಬರುವ ಮರಿಗಳು ತೀವ್ರವಾದ ಅಪಾಯಗಳನ್ನು ಎದುರಿಸುತ್ತಿವೆ. ಒಂದು ಅಂದಾಜಿನ ಪ್ರಕಾರ ಒಂದು ಸಾವಿರದಲ್ಲಿ ಒಂದು ಅಥವಾ ಹತ್ತು ಸಾವಿರದಲ್ಲಿ ಒಂದು ಮರಿಗಳು ಮಾತ್ರ ಪ್ರೌಢಾವಸ್ಥೆಗೆ ತಲುಪುತ್ತವೆ. ಈ ಮರಿಗಳು ತಮ್ಮ ಜೀವನದ ಆರಂಭಿಕ ದಿನಗಳಲ್ಲಿ ಯಾವಾಗಲೂ ಪರಭಕ್ಷಕಗಳಿಂದ ಅಪಾಯವನ್ನು ಎದುರಿಸುತ್ತಿದ್ದವು, ಇದರ ಜೊತೆಗೆ ಮಾನವನ ಹಸ್ತಕ್ಷೇಪವೂ ಸೇರಿಕೊಂಡು ಅವುಗಳ ಬದುಕುಳಿಯುವ ಪ್ರಮಾಣ ಕ್ಷೀಣಿಸುತ್ತಾ ಸಾಗುತ್ತಿದೆ ಎಂದು ಹೇಳಬಹುದು. ಹಡಗುಗಳಿಂದ ಹೊರಚೆಲ್ಲುವ ಎಣ್ಣೆ, ಕಶ್ಮಲ ದ್ರವಗಳು ಸಮುದ್ರ ನೀರಿನ ಆಮೆಗಳಿಗೆ ಅಪಾಯವನ್ನುಂಟು ಮಾಡಿದರೆ, ನದಿಗಳಲ್ಲಿ ಉಂಟಾಗುವ ಮಾಲಿನ್ಯದಿಂದ ಸಿಹಿ ನೀರಿನ ಆಮೆಗಳಿಗೆ ಆಪತ್ತು ಬಂದೊದಗಿದೆ. ಆಹಾರದ ಅಲಭ್ಯತೆ, ಪ್ಲಾಸ್ಟಿಕ್ ಭಕ್ಷಣೆ ಹೀಗೆ ಹಲವಾರು ಕಾರಣಗಳಿಂದಾಗಿ ಆಮೆಗಳು ಸಾವನ್ನಪ್ಪುತ್ತಿರುವುದು ಒಂದೆಡೆಯಾದರೆ, ವೈಕಲ್ಯತೆ ಹೊಂದಿದ, ಅಶಕ್ತ ಮರಿಗಳು ಜನ್ಮ ತಳೆಯುತ್ತಿರುವುದು ಕೂಡ ಒಂದು ಗಂಭೀರ ಚಿಂತನೆಯ ವಿಷಯವಾಗಿದೆ.

ಆಮೆಯ ಕುರಿತ ಕೆಲವು ಉಲ್ಲೇಖಗಳನ್ನು ನೋಡುವುದಾದರೆ– 'ನೆನಪಿಡಿ, ನಿಧಾನವಾಗಿ ಮತ್ತು ಸ್ಥಿರವಾಗಿರುವವನೇ ಓಟವನ್ನು ಗೆಲ್ಲುತ್ತಾನೆ.' 'ಆಮೆಯೊಂದಿಗೆ ನಡೆಯಿರಿ ಮತ್ತು ವಿರಾಮದಲ್ಲಿರುವ ಜಗತ್ತನ್ನು ನೋಡಿ'. 'ನಿಮ್ಮ ಸ್ವಂತ ಚಿಪ್ಪಿನಲ್ಲಿ ಆಮೆಯಂತೆ ಆರಾಮವಾಗಿರಲು ಪ್ರಯತ್ನಿಸಿ'. ಒಟ್ಟಾರೆಯಾಗಿ ಪರಿಸರ ವ್ಯವಸ್ಥೆಯನ್ನು ಸಮತೋಲನ ವಾಗಿಟ್ಟು ಕೊಳ್ಳುವಲ್ಲಿ ಆಮೆಗಳ ಪಾತ್ರ ತುಂಬಾ ನಿರ್ಣಾಯಕ ವಾಗಿದ್ದು, ಹಸಿರು ಆಮೆಗಳು ಸಮುದ್ರ ಹುಲ್ಲಿನ ಮೇಲೆ ಮೇಯುತ್ತವೆ. ಇದರಿಂದಾಗಿ ಅತಿಯಾಗಿ ಹುಲ್ಲು ಬೆಳೆಯು ವುದನ್ನು ಮತ್ತು ಸ್ವತಃ ಉಸಿರುಗಟ್ಟಿಸುವಿಕೆಯನ್ನು ತಡೆಯುತ್ತದೆ ಆರೋಗ್ಯಕರ ಸಮುದ್ರದ ಹುಲ್ಲಿನ ಹಾಸಿಗೆಗಳು ಅನೇಕ ಸಮುದ್ರ ಪ್ರಭೇದಗಳಿಗೆ ಬದುಕಲು ಸಹಾಯಕವಾಗುತ್ತದೆ. ಹಾಕ್ಸ್‌ಬಿಲ್ ಆಮೆಗಳು ಸ್ಪಂಜುಗಳನ್ನು ತಿನ್ನುತ್ತವೆ. ಇದು ಹವಳದ ಬಂಡೆಗಳನ್ನು ಮತ್ತು ಅವುಗಳ ಜೀವವೈವಿಧ್ಯವನ್ನು ರಕ್ಷಿಸಲು ಸಹಾಯಕವಾಗಿದೆ.




## ಗಣಿ ಪ್ರಭಾವಕ್ಕೊಳಗಾದ ವಲಯಗಳಿಗೆ ಸಮಗ್ರ ಪರಿಸರ ಯೋಜನೆಯಡಿ ಕಾರ್ಯಕಾರಿ ಸಮಿತಿ ರಚನೆ

# ಅಂತರ್ಜಲ ಮಟ್ಟ ಪುನಶ್ಚೇತನ, ಸುಧಾರಣೆಗೆ ಕ್ರಮ

### ಜಾಣೆಕುಂಟೆ–ವೇಣಿ ವೀರಾಪುರ ಹಾಗೂ ಹಲಕುಂದಿ–ಬೆಳಗಲ್ಲು ಎರಡು ಯೋಜನೆ ಆಯ್ಕೆ: ಮಹೇಶ್ ಕುಮಾರ್

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯದಲ್ಲಿ ಗಣಿಗಾರಿಕೆ ಪ್ರಭಾವಕ್ಕೆ ಒಳಗಾದ ವಲಯಗಳಿಗೆ ಸಮಗ್ರ ಪರಿಸರ ಯೋಜನೆಯನ್ನು ನಾಲ್ಕು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಅದರಲ್ಲಿ ಬಳ್ಳಾರಿ ಜಿಲ್ಲೆಯು ಕೂಡ ಒಂದಾಗಿದೆ. ಬಳ್ಳಾರಿ ತಾಲ್ಲೂಕಿನ ಜಾಣೆಕುಂಟೆ–ವೇಣಿ ವೀರಾಪುರ ಹಾಗೂ ಹಲಕುಂದಿ–ಬೆಳಗಲ್ಲು ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಗ್ರಾಮ್ಸ್ ಸಂಸ್ಥೆಯ ಮಹೇಶ್ ಕುಮಾರ್ ಹೇಳಿದರು.

ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಹಾಗೂ ಗ್ರಾಮ್ಸ್ ಸಂಸ್ಥೆ ಲಿಂಗಸಗೂರು ಇವರ ಸಹಯೋಗದಲ್ಲಿ ಬಳ್ಳಾರಿ ತಾಲೂಕಿನ ಹಲಕುಂದಿ–ಬೆಳಗಲ್ಲು ಉಪಜಲಾನಯನ ಯೋಜನಾ ವ್ಯಾಪ್ತಿಯಲ್ಲಿ ಬರುವ ಹಲಕುಂದಿ ಗ್ರಾಮ ಪಂಚಾಯಿತಿಯ ಸಭಾಂಗಣದಲ್ಲಿ ಬುಧವಾರ ಜರುಗಿದ ಗಣಿ ಪ್ರಭಾವಕ್ಕೆ ಒಳಗಾದ ವಲಯಗಳಿಗೆ ಸಮಗ್ರ ಪರಿಸರ ಯೋಜನೆಯ ಕಾರ್ಯಕಾರಿ ಸಮಿತಿ ರಚನೆ ಸಭೆಯಲ್ಲಿ ಅವರು ಮಾತನಾಡಿದರು.

ಹಲಕುಂದಿ ಬೆಳಗಲ್ಲು ಉಪಜಲಾನಯನ ಯೋಜನಾ ವ್ಯಾಪ್ತಿಯಲ್ಲಿ ಸುಮಾರು 4,196 ಹೇಕ್ಟರ್ ಪ್ರದೇಶಗಳಲ್ಲಿ ಈ ಯೋಜನೆಯ ಕಾರ್ಯನಿರ್ವಹಿಸುತ್ತಿದ್ದು, ಸುಮಾರು 6 ಹಳ್ಳಿಗಳು ಈ ಯೋಜನೆಯಡಿ ಬರುತ್ತವೆ ಎಂದು ತಿಳಿಸಿದರು. ಮುಖ್ಯವಾಗಿ ಈ ಯೋಜನೆಯಡಿ ಮಣ್ಣು ಮತ್ತು ನೀರಿನ ಸಂರಕ್ಷಣೆ ಮಾಡಲು ರೈತರ ಜಮೀನುಗಳಿಗೆ ಉಪಚಾರಗಳನ್ನು ಮಾಡುವುದು, ಮಳೆಯ ಹಸಿರುಯುತ ಭೂಮಿಯ ಉತ್ಪಾದಕತೆ ಸಾಮರ್ಥ್ಯ ಹೆಚ್ಚಿಸುವುದಾಗಿದೆ ಎಂದರು.



ಯೋಜನಾ ವ್ಯಾಪ್ತಿಯ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಪುನಶ್ಚೇತನಗೊಳಿಸುವುದು ಮತ್ತು ನೀರಿನ ಮಟ್ಟ ಸುಧಾರಣೆಯಾಗುವಂತೆ ಕ್ರಮವಹಿಸುವುದು. ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡುವುದರ ಮುಖಾಂತರ ಮಣ್ಣಿನ ಸವಕಳಿ ತಡೆಗಟ್ಟುವುದು. ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಕೃಷಿ ಚಟುವಟಿಕೆಗಳ ಬಳಕೆಗಾಗಿ ಮಳೆ ನೀರು ಕೊಯ್ಲು ರಚನೆಗಳ ಮೂಲಕ ನೀರನ್ನು ಸಂರಕ್ಷಣೆ ಮಾಡುವುದು. ಕೃಷಿ ಉತ್ಪಾದನೆಯನ್ನು ಸುಸ್ಥಿರಗೊಳಿಸುವುದು ಹಾಗೂ ರೈತ ಸಮುದಾಯದ ಜೀವನ ಮಟ್ಟವನ್ನು ಸುಧಾರಣೆ ಮಾಡುವುದಾಗಿದೆ ಎಂದು ತಿಳಿಸಿದರು.

ಮುಖ್ಯವಾಗಿ ಆದಾಯ ಉತ್ಪನ್ನ ಚಟುವಟಿಕೆಗಳನ್ನು ಸ್ವಸಹಾಯ ಗುಂಪುಗಳಿಗೆ ತರಬೇತಿ ನೀಡುವುದರ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲಾಗುವುದು ಮತ್ತು ಆರ್ಥಿಕತೆ ಹೆಚ್ಚಿಸುವ ಕಾರ್ಯ ಮಾಡಲಾಗುತ್ತದೆ ಎಂದು ತಿಳಿಸಿದರು.


ಕೃಷಿ ಅಧಿಕಾರಿ ಬಸವರಾಜ್ ಮಾತನಾಡಿ, ಜಲಾನಯನ ಸಮಿತಿಯು ಈ ಯೋಜನೆಯ ಮೇಲ್ವಿಚಾರಣೆ ಮಾಡಲು ಮತ್ತು ಅಗತ್ಯ ದಾಖಲೆ ನಿರ್ವಹಣೆ ಮಾಡಲು ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದರು.

ಜಲಾನಯನ ಸಮಿತಿಯು ಗ್ರಾಮ ಪಂಚಾಯಿತಿಗೆ ಒಂದರಂತೆ ಇದ್ದು, ಇದರಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರೇ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ ಮತ್ತು ಯೋಜನಾ ವ್ಯಾಪ್ತಿಯ ಗ್ರಾಮಗಳಲ್ಲಿಯ ಇಬ್ಬರು ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರು ಈ ಸಮಿತಿಗೆ ಸದಸ್ಯರಾಗಿರುತ್ತಾರೆ. ಜೊತೆಗೆ ಸ್ವಸಹಾಯ ಗುಂಪಿನ ಮಹಿಳೆಯರು ಎರಡರಿಂದ ಮೂರು ಜನ ಪ್ರತಿನಿಧಿಗಳು ಮತ್ತು ಬಳಕೆದಾರ ಗುಂಪುಗಳಿಂದ ಮೂರರಿಂದ ನಾಲ್ಕು ಜನ ಪ್ರತಿನಿಧಿಗಳು ಮತ್ತು ಸರಕಾರೇತರ ಸಂಸ್ಥೆ ಪ್ರತಿನಿಧಿಗಳು ಇಬ್ಬರು ಹಾಜರಾಗಿರುತ್ತಾರೆ ಹಾಗೂ ಸಂಬಂಧಿಸಿದ ಕೃಷಿ ಅಧಿಕಾರಿಗಳು ಈ ಒಂದು ಸಮಿತಿಗೆ ಖಜಾಂಚಿ ಅಥವಾ ಕಾರ್ಯದರ್ಶಿಗಳಾಗಿರುತ್ತಾರೆ ಎಂದು ಅವರು ವಿವರಿಸಿದರು.

ಜೊತೆಗೆ ಪ್ರತಿ ವರ್ಷ ಕೂಡ ಶೇ.20ರಷ್ಟು ಕಾರ್ಯಕಾರಿ ಸಮಿತಿ ಸದಸ್ಯರು ಬದಲಾಗುತ್ತಿರುತ್ತಾರೆ. ಶೇ.18ರಷ್ಟು ಪ.ಜಾತಿ ಮತ್ತು ಪ.ಪಂಗಡದ ಸದಸ್ಯರು ಜಲಾನಯನ ಸಮಿತಿಯಲ್ಲಿ ಇರುತ್ತಾರೆ ಎಂದು ತಿಳಿಸಿದರು.

ಬಳಿಕ ಹಲಕುಂದಿ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರುಗಳು, ಕೃಷಿ ಇಲಾಖೆಯ ಕೃಷಿ ಅಧಿಕಾರಿಗಳು, ತಾಂತ್ರಿಕ ಅಧಿಕಾರಿಗಳು, ಅನುಷ್ಠಾನ ಸಂಸ್ಥೆಯ ಸಿಇಓ ಮತ್ತು ಉಪಜಲಾನಯನ ಯೋಜನೆಯ ತಂಡದ ನಾಯಕರು, ಐಜಿಎ ಪರಿಣಿತರು, ಜಲಾನಯನ ಸಹಾಯಕರು, ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರು, ಬಳಕೆದಾರ ಗುಂಪಿನ ರೈತ ಸದಸ್ಯರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 22–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.80 ಅಡಿ |
| ಒಳ ಹರಿವು | 9993 ಕ್ಯುಸೆಕ್ |
| ಹೊರ ಹರಿವು | 2100 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.058 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.51 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.380 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

23–05–2025 – ಶುಕ್ರವಾರ

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉ.ಭಾದ್ರಪದ |
| ಯೋಗ | : ಪ್ರೀತಿ |
| ಕರಣ | : ಭವ |
| ಸೂರ್ಯೋದಯ | : 05:44:03 |
| ಸೂರ್ಯಾಸ್ತ | : 19:03:35 |
| ರಾಹು ಕಾಲ | : 10:44–12:24 |
| ಯಮಘಂಡ ಕಾಲ | : 15:44–17:24 |
| ಗುಳಿಕ ಕಾಲ | : 07:24–09:04 |

## ಮೈಕ್ರೋ ನ್ಯೂಸ್

### ವಿದ್ಯಾರ್ಥಿ ವೇತನಕ್ಕೆ ಅನ್‌ಲೈನ್ ಮೂಲಕ ನೊಂದಾಯಿಸಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

2025–26 ನೇ ಸಾಲಿನಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ(9&10 ನೇ ತರಗತಿ) ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಎನ್‌ಎಸ್‌ಪಿ ನ್ಯಾಷನಲ್ ಸ್ಕಾಲರ್ ಶಿಫ್ ಪೋರ್ಟ್ಲ್‌ನಲ್ಲಿ ನೊಂದಾಯಿಸಲು ಅವಕಾಶ ನೀಡಲಾಗಿದೆ ಎಂದು ವಿಜಯನಗರ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಭಾರತ ಸರ್ಕಾರದ ಮಿನಿಸ್ಟ್ರಿ ಆಫ್ ಎಲೆಕ್ಟ್ರಾನಿಕ್ಸ್ ಅಂಡ್ ಇನ್ಫಾರಮೇಶನ್ ಟೆಕ್ನಾಲಜಿ ರವರು ಅಭಿವೃದ್ಧಿ ಪಡಿಸಿರುವ ಎನ್‌ಎಸ್‌ಪಿ ತಂತ್ರಾಂಶದಲ್ಲಿ ವೆಬ್‌ಸೈಟ್ ಲಿಂಕ್ http://scholoarships.gov.in ನಲ್ಲಿ ಒನ್ ಟೈಮ್ ರಿಜಿಸ್ಟ್ರೇಷನ್ ಸಂಖ್ಯೆಯನ್ನು ಸೃಜಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಕಚೇರಿ, 29 ನೇ ಕ್ರಾಸ್, ರಾಜೀವ್ ನಗರ, ರಾಜೀವ್ ಪಾರ್ಕ್ ಹತ್ತಿರ, ಹೊಸಪೇಟೆ ಮೊ.7022328382, 6360023591. ಕೂಡ್ಲಿಗಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿ, ಮೊ.8618920881, 6360559281, ಹಗರಿಬೊಮ್ಮನಹಳ್ಳಿ ತಾಲೂಕು ಸಮಾಜ ಕಲ್ಯಾಣ ಇಲಾಖೆ ಕಚೇರಿ, ಮೊ.9844801525, 9448441619, ಸಂಡೂರು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಮೊ.7353139094, 9901147362, ಹರಪನಹಳ್ಳಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಕಚೇರಿ,ಮೊ.9945137480, 8496080050, ಹೂವಿನಹಡಗಲಿ ತಾಲೂಕು ಸಮಾಜ ಕಲ್ಯಾಣ ಇಲಾಖೆ ಕಚೇರಿ, ಮೊ.9845326650, 9482608061 ಕರೆ ಮಾಡಿ ಅಥವಾ ಖುದ್ದು ಕಚೇರಿ ಸಮಯದಲ್ಲಿ ಭೇಟಿ ನೀಡಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿ ನಿಲಯಗಳ ಪ್ರವೇಶಾತಿ ಆರಂಭ

### ಎಸ್ಸಿ, ಎಸ್ಟಿ ವಿದ್ಯಾರ್ಥಿಗಳು ಆಗಸ್ಟ್ 31 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

2025–26ನೇ ಸಾಲಿನಲ್ಲಿ ಹೊಸಪೇಟೆ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಹೊಸಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಜಿಲ್ಲೆಯ ಅರ್ಹ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಇಲಾಖಾ ವೆಬ್ ಸೈಟ್ ಮೂಲಕ www.sw.kar.nic.in ನಲ್ಲಿ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸಲ್ಲಿಸಿದ ಅರ್ಜಿ ಮತ್ತು ಅಗತ್ಯ ಇರುವ ಎಲ್ಲಾ ದಾಖಲಾತಿಗಳೊಂದಿಗೆ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಹೊಸಪೇಟೆ ಕಚೇರಿಗೆ ಅಥವಾ ವಸತಿ ನಿಲಯಗಳಿಗೆ ಸಲ್ಲಿಸಬೇಕು.

ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ, ಮರಿಯಮ್ಮನಹಳ್ಳಿ, ಕಮಲಾಪುರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯ ಹೊಸಪೇಟೆ, ಕಮಲಾಪುರ ಸೇರಿದಂತೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ 1,2,3,4 ಮತ್ತು ತಾಂತ್ರಿಕ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ. ಬಾಲಕಿಯರ ವಿದ್ಯಾರ್ಥಿ ನಿಲಯ ಹೊಸಪೇಟೆ. ಹಂಪಿ ಕನ್ನಡ ವಿವಿಯ ಬಾಲಕರ ವಿದ್ಯಾರ್ಥಿ ನಿಲಯ ಈ ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿಗಳು ಆರಂಭವಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 31 ರಂದು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ 9480843076 ಸಂಖ್ಯೆಗೆ ಕಚೇರಿ ಸಮಯದಲ್ಲಿ ಕರೆ ಮಾಡಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದ್ವಿತೀಯ ಪಿಯು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಿ

**ಮೊದಲ ಪುಟದಿಂದ**

ರಾಜ್ಯದಲ್ಲಿ 60,692 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದರಂತೆ ರಾಯಚೂರು ಜಿಲ್ಲೆಯಲ್ಲಿ 6,788 ವಿದ್ಯಾರ್ಥಿಗಳ ಪೈಕಿ 1625 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಪ್ರತಿಶತ 23.09 ಫಲಿತಾಂಶ ಬಂದಿದೆ.

ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮೂರನೇ ಪರೀಕ್ಷೆ–3ಯನ್ನು ಜೂನ್ 09 ರಿಂದ ಜೂನ್ 20ರವರೆಗೆ ನಡೆಸಲು ದಿನಾಂಕ ನಿಗದಿಪಡಿಸಿದೆ. ಆದ್ದರಿಂದ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಮೇ 28 ಅಂತಿಮ ದಿನಾಂಕವಾಗಿದ್ದು, ಅನುತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳು ತಮ್ಮ ಮುಂದಿನ ಉತ್ತಮ ಭವಿಷ್ಯಕ್ಕಾಗಿ ವಿದ್ಯಭ್ಯಾಸ ಮುಂದುವರಿಸಬೇಕು ಎಂಬುದು ಘನ ರಾಜ್ಯ ಸರ್ಕಾರದ ಆಶಯವಾಗಿರುತ್ತದೆ.

ಪಾಲಕರಲ್ಲಿ ಮನವಿ: ವಿದ್ಯಾರ್ಥಿಗಳು ಓದಿನಲ್ಲಿ ಹಿಂದುಳಿಯುವುದು ಕೆಲವೊಮ್ಮೆ ಸಹಜ. ಕಡಿಮೆ ಅಂಕಗಳು ಬಂದಾಗ ಮತ್ತು ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ಯಾವುದೇ ಕಾರಣಕ್ಕೂ ಕುಗ್ಗಬಾರದು. ಈ ಬಗ್ಗೆ ಪಾಲಕರು ಮಕ್ಕಳಲ್ಲಿ ತಿಳಿ ಹೇಳಿ ಪರೀಕ್ಷೆ–3ಗೆ ರಾಯಚೂರು ಜಿಲ್ಲೆ ಎಲ್ಲಾ ವಿದ್ಯಾರ್ಥಿಗಳು ನೋಂದಾಯಿಸಿಕೊಂಡು ಪರೀಕ್ಷೆಗೆ ಹಾಜರಾಗುವಂತೆ ಆಯಾ ವಿದ್ಯಾರ್ಥಿಗಳ ಪೋಷಕರು ಮಕ್ಕಳಿಗೆ ಪ್ರೇರೇಪಿಸಬೇಕು ಎಂದು ಇದೆ ವೇಳೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ವಿದ್ಯಾರ್ಥಿಗಳ ಪಾಲಕರಲ್ಲಿ ಮನವಿ ಮಾಡಿದರು.

ಪ್ರಾಂಶುಪಾಲರಲ್ಲಿ ಮನವಿ: ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳಲು ಕಾರಣ ಏನು? ಫಲಿತಾಂಶ ಕುಸಿಯಲು ವಾಸ್ತವವಾಗಿ ಗಂಭೀರ ಕಾರಣಗಳೇನು ಎಂಬುದು ಎಲ್ಲ ಪ್ರಾಂಶುಪಾಲರಿಗೆ ತಿಳಿದ ವಿಷಯವಾಗಿರುತ್ತದೆ. ಆದ್ದರಿಂದ ಎಲ್ಲ ಪ್ರಾಂಶುಪಾಲರು ಜಾಗೃತರಾಗಿ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಠಿಯಿಂದ ಆಲೋಚಿಸಿ ಕಾರ್ಯತತ್ಪರರಾಗಬೇಕು. ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕ್ರಮವಹಿಸಬೇಕೆಂದು ಎಲ್ಲ ಪ್ರಾಂಶುಪಾಲರುಗಳಲ್ಲಿ ಮನವಿ ಮಾಡಿದರು. 2025ರ ಮಾರ್ಚನಲ್ಲಿ ಪರೀಕ್ಷೆ–1ಗೆ ಒಟ್ಟು 18,414 ವಿದ್ಯಾರ್ಥಿಗಳು ನೋಂದಾಯಿಸಿದ್ದು, ಈ ಪೈಕಿ 10,818 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಜಿಲ್ಲೆಯ ಪ್ರತಿಶತ ಫಲಿತಾಂಶವು ಶೇ.58.75 ಆಗಿದೆ. ಅಲ್ಲದೆ ಏಪ್ರಿಲ್ ಮೇ ತಿಂಗಳಿನಲ್ಲಿ ಪರೀಕ್ಷೆ–2 ನಡೆಸಲಾಗಿದ್ದು, 6,788 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದು, ಈ ಪೈಕಿ 1,625 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ.23.09 ಫಲಿತಾಂಶವನ್ನು ಪಡೆಯಲಾಯಿತು ಎಂದು ಇದೆ ವೇಳೆ ಅವರು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ಸೋಮಶೇಖರಪ್ಪ ಹೋಕ್ರಾಣಿ, ಮಾನ್ವಿ ಸರ್ಕಾರಿ ಬಾಲಕರ ಪಿಯು ಕಾಲೇಜಿನ ಪ್ರಾಂಶುಪಾಲರಾದ ಡಾ.ಕುಂಟಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ ಸುಧಾ ಎಂ.ಎಂ. ಸೇರಿದಂತೆ ಇತರರು ಇದ್ದರು.

# ಕನಿಷ್ಠ ಬೆಂಬಲ ಬೆಲೆಯಡಿ ಜೋಳ ಖರೀದಿ ಮಾರ್ಪಾಡು

■ **ಹಂಪಿ ಟೈಮ್ಸ್ ಬಳ್ಳಾರಿ**

2024–25 ನೇ ಸಾಲಿನ ಮುಂಗಾರು ಋತುವಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜೋಳ ಖರೀದಿ ಪ್ರಕ್ರಿಯೆ ಮಾರ್ಪಾಡು ಮಾಡಲಾಗಿದೆ. ಸರ್ಕಾರದ ಆದೇಶದಂತೆ ರಾಜ್ಯದಲ್ಲಿ 1 ಲಕ್ಷ ಮೆಟ್ರಿಕ್ ಟನ್ ಜೋಳ ಖರೀದಿಸುವ ಬದಲಾಗಿ 1.25 ಲಕ್ಷ ಮೆಟ್ರಿಕ್ ಟನ್ ಜೋಳ ಖರೀದಿಸುವುದಾಗಿ ಆದೇಶಿಸಿದೆ ಹಾಗೂ ಬಿಳಿಜೋಳ ಮಾರ್ಗಸೂಚಿಯಂತೆ ಪ್ರತಿ ರೈತರಿಂದ ಪ್ರತಿ ಎಕರೆಗೆ 20 ಕ್ವಿಂಟಾಲ್ ನಂತೆ ಗರಿಷ್ಟ 150 ಕ್ವಿಂಟಾಲ್ ಬಿಳಿಜೋಳವನ್ನು ಖರೀದಿಸುವ ಬದಲಾಗಿ, ಪ್ರತಿ ರೈತರಿಂದ ಪ್ರತಿ ಎಕರೆಗೆ 10 ಕ್ವಿಂಟಾಲ್ ನಂತೆ ಗರಿಷ್ಠ 150 ಕ್ವಿಂಟಾಲ್ ಬಿಳಿಜೋಳ ಖರೀದಿಸಲಾಗುವುದು ಎಂದು ಮಾರ್ಪಾಡಿಸಿ ಆದೇಶಿಸಲಾಗಿದೆ.

ಅದರಂತೆ ಎನ್‌ಐಸಿ (NIC) ತಂತ್ರಾಂಶದಲ್ಲಿ ಮಾರ್ಪಾಡು ಆದ ಕೂಡಲೇ ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು. ಹಾಗಾಗಿ ಜಿಲ್ಲೆಯಲ್ಲಿ ಈಗಾಗಲೇ ನೋಂದಣಿ ಮಾಡಿಕೊಂಡ ರೈತರು ಕೂಡಲೇ ನೋಂದಾಯಿತ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಜೋಳ ಮಾರಾಟ ಮಾಡಿ ಶೀಘ್ರವಾಗಿ ಗ್ರೇನ್ ವೋಚರ್ ಪಡೆದುಕೊಳ್ಳಬೇಕು. ಮುಂಗಾರು ಜೋಳವನ್ನು ನೋಂದಣಿ ಮಾಡಿದ ರೈತರು ಶೀಘ್ರವಾಗಿ ಜೋಳ ಮಾರಾಟ ಮಾಡುವುದು ಅಗತ್ಯವಾಗಿದ್ದು, ರೈತರು ಮಾರಾಟ ಮಾಡುವ ಜೋಳವನ್ನು ಜೋಳ ಉಪಯೋಗಿಸುವ ಜಿಲ್ಲೆಗಳಿಗೆ ಪಡಿತರ ವಿತರಣೆ ಹಂಚಿಕೆಗೆ ನೀಡಲಾಗುವುದು. ಈ ನಿಟ್ಟಿನಲ್ಲಿ ಶೀಘ್ರವಾಗಿ ನೋಂದಾಯಿತ ರೈತರು ಜೋಳವನ್ನು ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡುವ ಮೂಲಕ ಸರ್ಕಾರದ ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು. ಬೆಂಬಲ ಬೆಲೆ ಯೋಜನೆ ಬಗ್ಗೆ ರೈತರಿಗೆ ಯಾವುದೇ ಸಮಸ್ಯೆಗಳಿದ್ದರೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತದ ಶಾಖಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಜಿಲ್ಲಾ ವ್ಯವಸ್ಥಾಪಕರು ಹಾಗೂ ಆಯಾ ತಾಲ್ಲೂಕಿನ ತಹಸಿಲ್ದಾರ್, ಕೃಷಿ ಅಧಿಕಾರಿ, ಎ.ಪಿ.ಎಂ.ಸಿ ಕಾರ್ಯದರ್ಶಿ ಅಥವಾ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಬೇಕು ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್‌ರವರ ಏಕಸದಸ್ಯ ವಿಚಾರಣಾ ಆಯೋಗದ ನಿರ್ದೇಶನದಂತೆ ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಸಮೀಕ್ಷೆಯ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ತಿಳಿಸಿದ್ದಾರೆ.

ಮೊದಲನೇಯ ಹಂತ ಮನೆಮನೆ ಭೇಟಿ ಸಮೀಕ್ಷೆಯನ್ನು ಮೇ.25 ರವರೆಗೆ ವಿಸ್ತರಿಸಲಾಗಿದೆ. ಎರಡನೇ ಹಂತ ವಿಶೇಷ ಶಿಬಿರ ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ ಮೂರು ದಿನಗಳ ಕಾಲ ಮೇ.26 ರಿಂದ ಮೇ.28 ರವರೆಗೆ ಮರುನಿಗಧಿಪಡಿಸಲಾಗಿದೆ. ಮೂರನೇ ಹಂತ ಅನ್‌ಲೈನ್ ಮೂಲಕ ಸ್ವಯಂ ಘೋಷಣೆಯನ್ನು ಮೇ.19 ರಿಂದ ಮೇ.28 ರವರೆಗೆ ನಿಗಧಿಪಡಿಸಲಾಗಿದೆ.

ಸಾರ್ವಜನಿಕರ ಅನುಕೂಲಕ್ಕಾಗಿ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಕಂಟ್ರೋಲ್ ರೂಂಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಸಮೀಕ್ಷೆಯ ಕುರಿತು ಯಾವುದೇ ಮಾಹಿತಿಗಳಿದ್ದಲ್ಲಿ ಆಯಾ ವ್ಯಾಪ್ತಿಯ ಕಂಟ್ರೋಲ್ ರೂಂ ಅಥವಾ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಬೇಕಿದೆ.

**ನೋಡಲ್ ಅಧಿಕಾರಿಗಳು ವಿವರ**

**ಜಿಲ್ಲಾ ನೋಡಲ್ ಅಧಿಕಾರಿ ಕೆ.ಬಿ.ರಾಮಚಂದ್ರಪ್ಪ, ಜಿಲ್ಲಾ ಅಧಿಕಾರಿ, ಹಿಂದುಳಿದ ಕಲ್ಯಾಣ ಇಲಾಖೆ, 9141827465, ವಿಜಯನಗರ ನೋಡಲ್ ಅಧಿಕಾರಿ ರಮೇಶ್ 8095002829, ಹೊಸಪೇಟೆ ನಜೀಮಾ ಭಾನು 9108777499, ಹಗರಿ ಬೊಮ್ಮನಹಳ್ಳಿ ಆನಂದ ವೈ.ಡೊಳ್ಳಿನ 9901980762, ಕೂಡ್ಲಿಗಿ ಶಾಹೇಖಾ ಅಹ್ಮದಿ 8105909630, ಹಡಗಲಿ ಜ್ಯೋತಿ 9482608061, ಹರಪನಹಳ್ಳಿ ಗಂಗಪ್ಪ ಎಸ್.ಆರ್. 9739094433 ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

**ಹಂಪಿ ಟೈಮ್ಸ್ SSLC ಮಾರ್ಗದರ್ಶಿ**
**ಇ-ಪೇಪರ್‌ನಲ್ಲೂ ಲಭ್ಯ**
**ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..**
www.hampitimes.com
epaper.hampitimes.com